ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ 2011

ಬೆಲೆ ರೂ. 1.



ಅಭಿನಂದನೆ

## ಎಸ್.ಎಲ್. ಭೈರಪ್ಪನವರಿಗೆ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿ



ಕನ್ನಡದ ಖ್ಯಾತ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಅವರ 'ಮಂದ್ರ' ಕಾದಂಬರಿಗೆ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿ ಲಭಿಸಿದೆ. ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದ 79ರ ಹರೆಯದ ಎಸ್.ಎಲ್. ಭೈರಪ್ಪ ಅವರ 22 ಕಾದಂಬರಿಗಳು ಪ್ರಕಟಗೊಂಡಿದ್ದು, ಕಳೆದ 25 ವರ್ಷಗಳಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಅತಿ ಹೆಚ್ಚು ಬೇಡಿಕೆಯ ಕಾದಂಬರಿಕಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 'ಮಂದ್ರ' ಕಾದಂಬರಿ ಕೂಡಾ ಸಾಹಿತ್ಯ ವಲಯದಲ್ಲಿ ಬಹು ಜನಪ್ರಿಯವಾಗಿತ್ತು.

ಧರ್ಮಶ್ರೀ, ದೂರ ಸರಿದರು, ಮತದಾನ, ವಂಶವೃಕ್ಷ, ನಾಯಿ ನೆರಳು, ತಬ್ಬಲಿಯು ನೀನಾದೆ ಮಗನೇ, ಗೃಹಭಂಗ, ದಾಟು, ಗ್ರಹಣ, ಪರ್ವ, ಆವರಣ ಮೊದಲಾದ ಕಾದಂಬರಿಗಳು ದೇಶದ ಅತಿ ಹೆಚ್ಚು ಭಾಷೆಗಳಿಗೆ ಭಾಷಾಂತರಗೊಂಡಿದ್ದು ಅಪಾರ ಮನ್ನಣೆ ಗಳಿಸಿದೆ. ಕನ್ನಡವಲ್ಲದೇ, ಹಿಂದಿ ಹಾಗೂ ಮರಾಠಿ ಸಾಹಿತ್ಯ ಲೋಕದಲ್ಲಿಯೂ ಅತ್ಯಂತ ಜನಪ್ರಿಯರಾಗಿರುವ ಭೈರಪ್ಪ ಅವರ ಕಾದಂಬರಿಗಳ ವಸ್ತು, ರಚನೆ ಹಾಗೂ ಪಾತ್ರ ಸೃಷ್ಟಿಗಳು ವಿಭಿನ್ನ ಹಾಗೂ ವಿಶಿಷ್ಟವಾಗಿದೆ. ಅಲ್ಲದೇ ಹೆಚ್ಚು ಸಾರ್ವಜನಿಕ ಚರ್ಚೆ ಹಾಗೂ ಸಾಕಷ್ಟು ವಿವಾದಗಳನ್ನು ಹುಟ್ಟು ಹಾಕಿದೆ. ಭೈರಪ್ಪನವರ ಇತ್ತೀಚಿನ ಕೃತಿ 'ಆವರಣ' ಪ್ರಕಟಗೊಳ್ಳುವ ಮೊದಲೇ ಮಾರಾಟವಾಗಿರುವ ದಾಖಲೆಯಷ್ಟೇ ಅಲ್ಲದೇ ಪ್ರಕಟಗೊಂಡ 5ತಿಂಗಳಲ್ಲಿ 10 ಮುದ್ರಣಗಳನ್ನು ಕಂಡ ಕೃತಿಯೊಂದು ಭಾರತೀಯ ಸಾಹಿತ್ಯ ಲೋಕದಲ್ಲಿ ಹೊಸ ದಾಖಲೆಯನ್ನು ನಿರ್ಮಿಸಿದೆ. ಅವರ ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೇ, ಮತದಾನ, ನಾಯಿ ನೆರಳು ಕಾದಂಬರಿಗಳು ಸಿನಿಮಾಗಳಾಗಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿದೆ. ಅವರ ದಾಟು ಮತ್ತು ಗೃಹಭಂಗ ಕಾದಂಬರಿಗಳು ಟೆಲಿ ಧಾರಾವಾಹಿಗಳಾಗಿ ಜನಪ್ರಿಯಗೊಂಡಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಅಕಾಡೆಮಿ ಮೊದಲಾದ ಪ್ರಶಸ್ತಿ ಪುರಸ್ಕೃತರಾದ ಭೈರಪ್ಪನವರ ಮುಡಿಗೆ ಪ್ರಶಸ್ತಿಯ ಮತ್ತೊಂದು ಗರಿ 'ಸರಸ್ವತಿ ಸಮ್ಮಾನ್' ಸಂದಿದೆ. ದೇಶದ ಎಲ್ಲ ಸಾಹಿತ್ಯಾಸಕ್ತರ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಬರ್ಲಿನ್, ಟ್ಯಾಗೋರ್ ಕೇಂದ್ರದ ನೂತನ ನಿರ್ದೇಶಕರಾಗಿ ಡಾ. ಎಚ್.ಎಸ್. ಶಿವಪ್ರಕಾಶ್



ನಮ್ಮೆಲ್ಲರ ಅತ್ಯಂತ ಪ್ರೀತಿಯ ಪ್ರೊ. ಎಚ್.ಎಸ್. ಶಿವಪ್ರಕಾಶ್ ಈಗ ಬಹು ಪ್ರತಿಷ್ಠಿತ ಬರ್ಲಿನ್ ನಗರದ ಟ್ಯಾಗೋರ್ ಸೆಂಟರ್‌ನ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಇದು ಇಡೀ ಕರ್ನಾಟಕಕ್ಕೆ, ವಿಶೇಷವಾಗಿ ದೆಹಲಿ ಕನ್ನಡ ಸಮುದಾಯಕ್ಕೆ ಅಪಾರ ಸಂತೋಷ ಮತ್ತು ಹೆಮ್ಮೆಯ ಸಂಗತಿ. ಲಂಡನ್ ನಗರದ ನೆಹರು ಸೆಂಟರ್‌ನ ಪ್ರಮುಖರಾಗಿ ಈ ಹಿಂದೆ ಶ್ರೀ ಗಿರೀಶ್ ಕಾರ್ನಾಡ್ ಅವರು ಕಾರ್ಯ ನಿರ್ವಹಿಸಿದ್ದರು. ಆನಂತರ ಕನ್ನಡಿಗರಿಗೆ ವಿದೇಶಾಂಗ ಇಲಾಖೆಯ ಮಹತ್ವದ ಜವಾಬ್ದಾರಿ ದೊರೆತಿರಲಿಲ್ಲ. ಇದೀಗ ಈ ಮಹತ್ವದ ಹೊಣೆ ನಮ್ಮ ಶಿವಪ್ರಕಾಶರ ಹೆಗಲೇರಿದೆ.

ಟ್ಯಾಗೋರ್ ಕೇಂದ್ರವು ಭಾರತದ ವೈವಿಧ್ಯಮಯ ಸಂಸ್ಕೃತಿ ಮತ್ತು ಸಮೃದ್ಧ ಪರಂಪರೆಗಳನ್ನು ಪ್ರತಿಬಿಂಬಿಸುವಂತಹ ವರ್ಣರಂಜಿತ ಕಲೆ, ನಾಟಕ, ನೃತ್ಯ, ಸಾಹಿತ್ಯಿಕ ಚಟುವಟಿಕೆಗಳು, ಚಲನಚಿತ್ರ, ವಿಚಾರಗೋಷ್ಠಿಗಳು, ಪ್ರದರ್ಶನಗಳನ್ನು ಆಯೋಜಿಸುವ ಮೂಲಕ ಜಗತ್ತಿನ ಬೇರೆ ಬೇರೆ ದೇಶಗಳ ಜನರಿಗೆ ಭಾರತೀಯತೆಯ ಸಾರಸತ್ವವನ್ನ ಪರಿಚಯಿಸುತ್ತದೆ. ಈ ದೃಷ್ಟಿಯಿಂದ ಗುರುದೇವ ರವೀಂದ್ರನಾಥ ಟ್ಯಾಗೂರ್‌ರ 150ನೇ ವರ್ಷದ ಜನ್ಮ ದಿನಾಚರಣೆಯನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಡಾ.ಹೆಚ್.ಎಸ್. ಶಿವಪ್ರಕಾಶ್ ಅವರು ನಿರ್ದೇಶಕರಾಗಿ ಆಯ್ಕೆಯಾಗಿರುವುದು ವಿಶೇಷವಾಗಿದೆ.

ದೇಶದ ಪ್ರತಿಭಾನ್ವಿತ ಕವಿ, ನಾಟಕಕಾರ, ಕಾವ್ಯಮೀಮಾಂಸಕ, ದಾರ್ಶನಿಕ ಶಿವಪ್ರಕಾಶ್ ಅವರು ಪ್ರತಿಷ್ಠಿತ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗುವ ಮೂಲಕ ಕರ್ನಾಟಕದಿಂದ ರಾಷ್ಟ್ರಮಟ್ಟಕ್ಕೆ ಪಯಣಿಸಿದರು. ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಧೀಶಕ್ತಿಯನ್ನು ಸಾಬೀತುಪಡಿಸಲು ಪಯಣ ಬೆಳೆಸಲಿದ್ದಾರೆ. ಅವರ ಬರ್ಲಿನ್ ಇರವು ಎಲ್ಲ ಶುಭ ತರಲಿ, ಭಾರತದ ಅದ್ಭುತ ಸಂಸ್ಕೃತಿಯ ವಿಶೇಷತೆಗಳು ಅವರ ವಿದ್ವತ್ಪೂರ್ಣ ವ್ಯಕ್ತಿತ್ವದ ಮೂಲಕ ಯುರೋಪ್ ರಾಷ್ಟ್ರಗಳಲ್ಲಿ ಸಂವಹನಗೊಳ್ಳಲಿ–ಇದು ನಮ್ಮ ನಿಮ್ಮೆಲ್ಲರ ಹೃತ್ಪೂರ್ವಕ ಹಾರೈಕೆ. ಶಿವಪ್ರಕಾಶರಂತಹ ಸಮರ್ಥರನ್ನು ಈ ಮಹತ್ವಪೂರ್ಣ ಹುದ್ದೆಗೆ ನೇಮಕ ಮಾಡಿದ್ದಕ್ಕಾಗಿ ನಮ್ಮ ನಾಡಿನವರೇ ಆದ ದೇಶದ ವಿದೇಶಾಂಗ ಸಚಿವ ಶ್ರೀ ಎಸ್.ಎಂ. ಕೃಷ್ಣ ಅವರಿಗೆ ನಮ್ಮ ನಮ್ರ ಕೃತಜ್ಞತೆಗಳು. ಅಪಾರ ಕನ್ನಡಪ್ರೇಮಿಗಳಾದ ಕೃಷ್ಣ ಅವರು ಶಿವಪ್ರಕಾಶರ ನೇಮಕದ ಮೂಲಕ ಕನ್ನಡದ ಅಂತಸ್ಸತ್ವವನ್ನು ಪಶ್ಚಿಮಕ್ಕೆ ಪರಿಚಯಿಸಲು ಅವಕಾಶ ಕಲ್ಪಿಸಿದ್ದಾರೆ. ನಮ್ಮ ನೆಲದ ಬಸವಣ್ಣ, ಕುವೆಂಪು ಅವರ ವಿಶ್ವಮಾನವತೆಯ ಸಿದ್ಧಾಂತಗಳನ್ನು ಯುರೋಪ್‌ಗೆ ಶಿವಪ್ರಕಾಶರು ಪರಿಚಯಿಸಲಿ ಎಂಬುದು ನಮ್ಮ ಆಶಯ ಹಾಗೂ ಕೋರಿಕೆ. ಮತ್ತೊಮ್ಮೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶಿವಪ್ರಕಾಶ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

## ಹುಡ್ಕೊ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ವೀರಣ್ಣ ಪಿ. ಬಳಿಗಾರ್



ಐ.ಎ.ಎಸ್. ಅಧಿಕಾರಿ ವೀರಣ್ಣ ಪಿ. ಬಳಿಗಾರ್ ಅವರು ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲೊಂದಾದ ಹುಡ್ಕೋದ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಏಪ್ರಿಲ್ 11ರಂದು ಅಧಿಕಾರ ಸ್ವೀಕರಿಸಿದ್ದಾರೆ. ಬಳಿಗಾರ್ ಅವರು ಅತ್ಯಂತ ಪ್ರಾಮಾಣಿಕ ಅಧಿಕಾರಿಗಳು ಎಂಬುದು ನಮ್ಮ ಪಾಲಿಗೆ ಹೆಮ್ಮೆಯ ಸಂಗತಿ. ಆ ಹೆಮ್ಮೆ ಇಮ್ಮಡಿಗೊಳ್ಳುವುದು ಅವರು ಅಪ್ಪಟ ಕನ್ನಡಿಗರೆಂಬ ಕಾರಣಕ್ಕಾಗಿ. ಇಂಜಿನಿಯರಿಂಗ್‌ನಲ್ಲಿ ಸ್ನಾತಕ, ಸ್ನಾತಕೋತ್ತರ ಪದವಿಗಳನ್ನು ಗಳಿಸಿರುವ ಅವರು ಕನ್ನಡದ ಕವಿಗಳೂ ಕೂಡ. 80ರ ದಶಕದಲ್ಲಿ ಬಳಿಗಾರ್ ಅವರು ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದರು. ಆಗ ಅವರು ಬರೆದ ಪದ್ಯದ ಮೊದಲೆರಡು ಸಾಲುಗಳು ಇನ್ನೂ ನನ್ನ ಸ್ಮೃತಿಪಟಲದಲ್ಲಿದೆ–***'ಕನ್ನಂಬಾಡಿ ಕಟ್ಟೆ ಕಟ್ಟಬೇಕೆಂದಿದ್ದೆ, ಆದರೀಗ ಅದನ್ನು ಕಾಯುವ ಕೆಲಸ!'*** ಸ್ವತಃ ಇಂಜಿನಿಯರ್ ಆಗಿದ್ದ ಬಳಿಗಾರರು ಜಿಲ್ಲಾಧಿಕಾರಿಗಳಾಗಿ, ಕಾನೂನು ಸುವ್ಯವಸ್ಥೆಯ ಅನುಷ್ಠಾನದ ಹೊಣೆ ಹೊತ್ತಿದ್ದ ಸಂದರ್ಭದಲ್ಲಿ ಮೂಡಿ ಬಂದ ಈ ಸಾಲುಗಳು ನಿಜಕ್ಕೂ ಅಪ್ಯಾಯಮಾನವಾಗಿದೆ. ಅತ್ಯಂತ ಪ್ರತಿಷ್ಠಿತ ಹುದ್ದೆಗಳನ್ನು ನಿಷ್ಠೆಯಿಂದ ನಿರ್ವಹಿಸಿದ ಬಳಿಗಾರರು ಎಂದೂ ಒತ್ತಡಗಳಿಗೆ ಮಣಿದವರಲ್ಲ. ಪ್ರಾಮಾಣಿಕ, ದಕ್ಷ ಆಡಳಿತಕ್ಕೆ ಮನೆಮಾತಾಗಿರುವ ಬಳಿಗಾರರು ರಾಜ್ಯಾದ್ಯಂತ ಚಿರಪರಿಚಿತರು. ಅವರ ಆಡಳಿತ ಅನುಭವ, ತಾಂತ್ರಿಕ ವಿದ್ವತ್ತು ಈಗ ಹುಡ್ಕೋದಲ್ಲಿ ಸಮರ್ಥವಾಗಿ ಮೇಳೈಸಲಿ, ಬಳಿಗಾರರು ಕಾಯುವ ಕೆಲಸದೊಂದಿಗೆ ಕಟ್ಟುವ ಕಾಯಕವನ್ನೂ ಮಾಡಲಿ–ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.

❑ **ಉಷಾ ಭರತಾದ್ರಿ**

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ : ಕೃಪೆ
ಚೈತನ್ಯ ಆರ್ಟ್ ಗ್ಯಾಲರಿ, ಗುಲ್ಬರ್ಗಾ
ಹಿಂಬದಿ ಚಿತ್ರ
ಶಾಲನ್ ಮುರಗೋಡ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಭಿಮತ
ಸಂಪುಟ 21 ಸಂಚಿಕೆ 8
ಮೇ 2011, ಬೆಲೆ ರೂ. 1

# ಮನದ ಮಾತು

ಪ್ರತಿ ವರ್ಷ ಬಂದು ಹೋಗುವ ಮೇ ತಿಂಗಳು ಅದರಲ್ಲೂ ತಿಂಗಳ ಮೊದಲ ದಿನ ನಮ್ಮ ಅಂತಃಸ್ಸಾಕ್ಷಿಯನ್ನು ಕಾಡದೇ ಇರದು. ಅಂದು ವಿಶ್ವಾದ್ಯಂತ ಕಾರ್ಮಿಕರ ದಿನ. ಕಾರ್ಮಿಕರ ಹಕ್ಕುಗಳಿಗೆ ವೇದಿಕೆ ಕಲ್ಪಿಸುವ ಈ ದಿನ ಕೋಟ್ಯಂತರ ಬಾಲ ಕಾರ್ಮಿಕರ ನಿತ್ಯ ನರಕ ಯಾತನೆಯತ್ತ ನಮ್ಮ ಗಮನ ಸೆಳೆಯುತ್ತದೆ. ಬಾಲ ಕಾರ್ಮಿಕರ ನಿಷೇಧದ ಕಾಯ್ದೆ ಜಾರಿಯಲ್ಲಿದ್ದರೂ ಅದರ ಅನುಷ್ಠಾನ ಅತ್ಯಂತ ಮಂದಗತಿಯಲ್ಲಿದೆ. ಅಲ್ಲದೆ ಕಾಯ್ದೆಯಲ್ಲಿನ ದುರ್ಬಲ ಅಂಶಗಳು ಶೋಷಿತರನ್ನು ಶಿಕ್ಷೆಗೆ ಗುರಿಪಡಿಸಲು ಅಡ್ಡಿ ಮಾಡುತ್ತವೆ. ಈ ಅಸಂಖ್ಯಾತ ಮುಗ್ಧ ಬಾಲ ಕಾರ್ಮಿಕರಲ್ಲಿ ನಮ್ಮ ದೇಶವನ್ನು ಸಮರ್ಥವಾಗಿ ಮುನ್ನಡೆಸುವ ಪ್ರತಿಭೆಗಳಿವೆ. ಆದ್ದರಿಂದ ಪ್ರಬಲ ಕಾಯ್ದೆಯಡಿ ಅಮಾಯಕ ಎಳೆಯ ಜೀವಿಗಳ ಶೋಷಣೆಯನ್ನು ತಪ್ಪಿಸುವ ಅನಿವಾರ್ಯತೆ ಇದೆ. ನ್ಯಾಯಾಂಗ ಹಾಗೂ ಕಾನೂನು ಕ್ಷೇತ್ರಗಳಲ್ಲಿ ಅಪರಿಮಿತ ಬದಲಾವಣೆಗಳ ಹರಿಕಾರರಾಗಿರುವ ನಮ್ಮ ನೆಚ್ಚಿನ ಕನ್ನಡಿಗ ರಾಷ್ಟ್ರದ ಕಾನೂನು ಸಚಿವ ಶ್ರೀ ಎಂ. ವೀರಪ್ಪ ಮೊಯಿಲಿ ಈ ಬಗ್ಗೆ ಹೆಚ್ಚು ಗಮನ ಹರಿಸಲಿ ಎಂಬುದು ನಮ್ಮ ಕೋರಿಕೆ.

ನಮ್ಮ ಬೆಂಗಳೂರಿಗೆ ಅತ್ಯಂತ ಸಮೀಪದಲ್ಲಿರುವ ಪುಟ್ಟಪರ್ತಿಯ ಸಾಯಿಬಾಬಾ ಅವರು ಇಹಲೋಕ ತ್ಯಜಿಸಿದ್ದಾರೆ. ಆದರೆ ಅವರು ನಮ್ಮ ನಾಡಿನಲ್ಲಿ ಸ್ಥಾಪಿಸಿರುವ ಸುಸಜ್ಜಿತ ಆಸ್ಪತ್ರೆಗಳು, ಸುವ್ಯವಸ್ಥಿತ ಶಿಕ್ಷಣ ಸಂಸ್ಥೆಗಳು, ಹಳ್ಳಿ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳು ಹಾಗೂ ಅನೇಕ ಸಾಮಾಜಿಕ ಕಾರ್ಯಗಳು ಅವರ ನೆನಪನ್ನು ಶಾಶ್ವತಗೊಳಿಸಿವೆ. ತಮ್ಮ ಜನಾಕರ್ಷಕ ವ್ಯಕ್ತಿತ್ವವನ್ನು ಕೇವಲ ಸ್ವಯಂಕೀರ್ತಿಗಾಗಿ ಬಳಸದೆ ಬಡಬಗ್ಗರ ಕಲ್ಯಾಣಕ್ಕೆ ಮುಡಿಪಿಟ್ಟಿದ್ದ ಸಾಯಿಬಾಬಾ ಅವರು ನಿಜಕ್ಕೂ ಅಭಿನಂದನಾರ್ಹರು. ಅಷ್ಟೇ ಅಲ್ಲದೆ ಅವರಂತೆ ಇರುವ ಅನೇಕ ಸಂತರಿಗೆ ಆದರ್ಶಪ್ರಾಯರು. ಸಾಯಿಬಾಬಾ ಅವರ ಸಾಮಾಜಿಕ ಕಾಳಜಿ ಇತರ 'ದೇವ ಮಾನವ'ರಿಗೆ ಸ್ಫೂರ್ತಿಯಾಗಲಿ, ಸಾಮಾಜಿಕ ಕಾರ್ಯಗಳು ಮತ್ತಷ್ಟು ಜರುಗಲಿ ಎಂಬುದು ನಮ್ಮ ಆಶೆ.

ಸದ್ದುಗದ್ದಲಗಳಿಲ್ಲದೆ ಬಲಿಷ್ಠ ರಾಷ್ಟ್ರ ಅಮೆರಿಕ ಆತಂಕವಾದದ ಪ್ರಮುಖ ವಕ್ತಾರ ಒಸಾಮ ಬಿನ್ ಲ್ಯಾಡನ್‌ನನ್ನು ಹತ್ಯೆಗೈದಿದೆ, ತನ್ಮೂಲಕ ಭಯೋತ್ಪಾದನೆಯ ಪ್ರಮುಖ ಬೇರನ್ನೇ ಕಿತ್ತೊಗೆದಿದೆ. ನಮ್ಮ ದೇಶ ಕೂಡ ಇದರಿಂದ ಪಾಠ ಕಲಿಯಬೇಕಿದೆ. ನಮ್ಮ ನೆಮ್ಮದಿಗೆ ಕುಂದು ತರುವ, ಮುಗ್ಧ ಜನರನ್ನು ಬೇಟೆಯಾಡುವ ಉಗ್ರಗಾಮಿಗಳ ಮೂಲಗಳನ್ನು ಶೋಧಿಸಿ ವಿನಾಶಗೊಳಿಸಬೇಕಿದೆ. ಇಲ್ಲದಿದ್ದರೆ ನಾವು, ನೀವು, ನಮ್ಮ ಮುಂದಿನ ಜನಾಂಗ ಭಯೋತ್ಪಾದನೆಯ ನೆರಳಿನಲ್ಲಿ ನರಳುವುದು ಖಚಿತ, ಸರ್ಕಾರವನ್ನು ನಡೆಸುವ ರಾಜಕೀಯ ನಾಯಕರು ಜಾಗೃತರಾಗಲಿ, ರಾಷ್ಟ್ರದ ಬದುಕು ಆತಂಕ ರಹಿತವಾಗಲಿ ಎಂಬುದು ನಮ್ಮ ಅಭಿಲಾಷೆ.

ಜಾತ್ಯಾತೀತ ಧೋರಣೆಗಳಿಗೆ ವಿಶ್ವಮಾನವತೆಯ ಪ್ರತಿಪಾದನೆಗೆ ವೈಜ್ಞಾನಿಕ ಮನೋಧರ್ಮವರ್ಧನೆಗೆ, ಅಹಿಂಸಾ ತತ್ವಗಳಿಗೆ ಅಡಿಪಾಯ ನಿರ್ಮಿಸಿದ ಭಗವಾನ್ ಬುದ್ಧ ಹಾಗೂ ನಮ್ಮ ನಾಡಿನ ಬಸವಣ್ಣ ಸ್ಮೃತಿ ಪಟಲದಲ್ಲಿ ಸುಳಿಯುವುದು ಈ ಮೇ ತಿಂಗಳಿನಲ್ಲಿಯೇ, ಈ ಈರ್ವರು ಮಹಾಪುರುಷರು ಪ್ರತಿಪಾದಿಸಿದ ಮೌಲ್ಯಗಳು ಜಾತ್ಯಾತೀತ, ಧರ್ಮಾತೀತ, ಭಾಷಾತೀತ, ಸೀಮಾತೀತ ಹಾಗೂ ಕಾಲಾತೀತವಾದವು. ಅಂತೆಯೇ ಅವು ಇಡೀ ಜಗತ್ತಿಗೆ ಅಂದಿಗೂ, ಇಂದಿಗೂ, ಎಂದೆಂದಿಗೂ ಪ್ರಸ್ತುತ. ಈ ಅದ್ಭುತ ಮಹಾನ್ ಚೇತನಗಳಿಗೆ ನಮ್ಮ ನಮ್ರ ನಮನ.

ನಮ್ಮ ದೆಹಲಿಯಲ್ಲಿ ಈಗ ಬಿಸಿಲು ಏರುತ್ತಿದೆ. ಅಲ್ಲದೆ ಶಾಲೆಗಳಿಗೂ ಬೇಸಿಗೆಯ ರಜೆ ಬರಲಿದೆ. ಬೇಸಿಗೆಯ ರಜೆಗಾಗಿ ನಮ್ಮ ನಾಡಿಗೆ ತೆರಳುವ ದೆಹಲಿ ಕನ್ನಡ ಬಾಂಧವರಿಗೆ ನಮ್ಮ ನಾಡಿನ ಮೋಹಕ ಬಿಸಿಲು, ನಡು ನಡುವಿನ ತಂಪಾದ ಮಳೆ, ನೀಲಾಕಾಶದ ಸುಂದರ ಮೋಡಗಳು ಮುದ ತರಲಿ, ಅನಿವಾರ್ಯವಾಗಿ ಇಲ್ಲಿಯೇ ಇರುವವರಿಗೆ ಕನ್ನಡ ನಾಡಿನ ನೆನಪು ಕಂಪನ್ನು ತರಲಿ – ಇದು ನಮ್ಮ ಹಾರೈಕೆ.

❑ ಉಷಾ ಭರತಾದ್ರಿ

# ಅಂತರಾಳದಿಂದ. . .

## ನನ್ನ ಕನಸಿನ ಕರ್ನಾಟಕ ಸಂಘ

ದೆಹಲಿ ಕರ್ನಾಟಕ ಸಂಘವನ್ನು ನಡೆಸುವುದು ಹೇಗೆ? ಅದರ ಕಾರ್ಯಕ್ರಮಗಳನ್ನು ಆಯೋಜಿಸುವುದು ಹೇಗೆ? ಅದರ ಮುಂದಿನ ಉದ್ದೇಶಗಳು ಹೇಗಿರಬೇಕು? ಬರೀ ಸಾಹಿತ್ಯ-ಸಂಸ್ಕೃತಿಗಳೆಂಬ ಕಾರ್ಯಕ್ರಮಗಳನ್ನೇ ಅದು ನಡೆಸುತ್ತ ಸಾಗಬೇಕೆ? ಅಥವಾ ದೆಹಲಿ ಕನ್ನಡಿಗರಿಗಾಗಿಯೇ ಕೆಲವೊಂದು ಕಾರ್ಯಕ್ರಮಗಳನ್ನು ಆಯೋಜಿಸುವತ್ತ ಅದು ಗಮನ ಹರಿಸಬೇಕೇ? ಈ ಬಗೆಯ ಹತ್ತು-ಹಲವು ಪ್ರಶ್ನೆಗಳು ನಮ್ಮೆಲ್ಲರನ್ನೂ ಕಾಡುತ್ತವೆ. ದೆಹಲಿ ಕರ್ನಾಟಕ ಸಂಘವನ್ನು ಭದ್ರ ಆರ್ಥಿಕ ಬುನಾದಿಯ ಮೇಲೆ ನಿಲ್ಲಿಸುವ ಬಗ್ಗೆ ಪ್ರಯತ್ನ ಮಾಡಬೇಕೆಂಬುದು ಕೆಲವರ ಅಭಿಪ್ರಾಯ. ದೆಹಲಿ ಕನ್ನಡಿಗರೆಲ್ಲರ ಆಶಯಗಳನ್ನು ಬಿಂಬಿಸುವಂತಹ ಕೆಲಸವನ್ನು ಅದು ಮಾಡುವಂತಾಗಬೇಕು ಎಂಬುದರ ಬಗ್ಗೆ ಇನ್ನೊಂದು ಮಾತಿಲ್ಲ. ಆದರೂ, ಸಂಘದ ಉದ್ದೇಶಗಳು ಇನ್ನೂ ವಿಸ್ತೃತರೂಪದಲ್ಲಿರಬೇಕು ಎಂಬುದರ ಬಗ್ಗೆ ನಾವು ಯೋಚಿಸಬೇಕಾಗಿದೆ.

ಸುಮಾರು ಎರಡು ದಶಕಗಳ ಹಿಂದೆ ಸಂಘದ ಮುಖಪತ್ರಿಕೆ 'ಅಭಿಮತ' ಪ್ರಾರಂಭವಾದಾಗ ಅದರ ಮೊದಲ ಸಂಚಿಕೆಯಲ್ಲಿ ಆಗಿನ ಅಧ್ಯಕ್ಷರಾದ ಶ್ರೀ ಎನ್.ಪಿ. ಭಟ್ಟರವರು "ನನ್ನ ಕನಸಿನ ಕನ್ನಡ ಸಂಘ" ಎಂಬ ಲೇಖನವನ್ನು ಬರೆದರು. ಅದರ ನಂತರ ಇನ್ನೂ ಹಲವರು ಈ ಕುರಿತಾದ ವಿಚಾರಗಳ ಮೇಲೆ ಲೇಖನಗಳನ್ನು ಬರೆದರು. ನಮ್ಮ 'ಕನಸಿನ' ಕರ್ನಾಟಕ ಸಂಘ ಹೇಗಿರಬೇಕು? ಎಲ್ಲರಿಗೂ ಅವರದೇ ಆದ ವಿಚಾರಗಳು, ಆಶಯಗಳು. . . ಒಲುಮೆಗಳು ಇರುತ್ತವೆ. ಇವೆಲ್ಲ ಏನೇ ಇದ್ದರೂ ಒಂದು ಮುಖ್ಯವಾಹಿನಿಯಲ್ಲಿ ಕರ್ನಾಟಕ ಸಂಘದ ಕಾರ್ಯಕಲಾಪಗಳು ನಡೆಯುತ್ತ ಸಾಗಬೇಕಾಗಿದೆ. ಆಗ ಅತ್ಯಂತ ಕಾಳಜಿಯಿಂದ, ಪ್ರೀತಿಯಿಂದ ಹಾಗೂ ಸಂವೇದನಾಶೀಲರಾಗಿ ಬರೆದ ಶ್ರೀ ಭಟ್ಟರ ಲೇಖನಕ್ಕೂ ಈಗಿನ ದೆಹಲಿ ಕರ್ನಾಟಕ ಸಂಘಕ್ಕೂ ಯಾಕೋ ತಾಳಮೇಳವಾಗುವಂತಿಲ್ಲ. ಆಗ ಏನೂ ಇಲ್ಲದ, ಏನೋ ಆಗಬೇಕೆಂದು ಹೊರಟಿದ್ದ ದೆಹಲಿ ಕರ್ನಾಟಕ ಸಂಘಕ್ಕೆ ಎಲ್ಲವನ್ನೂ ಬಿಟ್ಟು ಬಂದು ಓಲೈಸುವ ಕೈಗಳು ಹಲವಾರಿದ್ದವು. ಈಗ ನಮ್ಮೆಲ್ಲರ ದೆಹಲಿ ಕರ್ನಾಟಕ ಸಂಘಕ್ಕೆ ಏನೆಲ್ಲ ಮುತ್ತಿನಾಭರಣಗಳಿವೆ? ಅದರ ಉಡಿಯಲ್ಲಿ ಈಗ ಸುಂದರವಾದ ಸಭಾಂಗಣವಿದೆ; ವಿಚಾರ ಸಂಕಿರಣಗಳಿಗೆ ಬೇರೆ ಕೋಣೆಗಳಿವೆ; ಕಲಾ ಗ್ಯಾಲರಿಯೂ ಇದೆ. ಒಂದು ಬಗೆಯಲ್ಲಿ ಈಗಿನ ದೆಹಲಿ ಕರ್ನಾಟಕ ಸಂಘ ಯಾವುದೋ ಕಾರ್ಪೋರೇಟ್ ಮನೆಯಂತೆ ತೋರುತ್ತಿದೆ. ಅದನ್ನು ಓಲೈಸಲು ಬರುವವರಿಗೆ ಈಗ ಅದು ಒಂದು ಬಗೆಯ ತನ್ನದೇ ಆದ ರಾಜಕೀಯ-ಸಾಂಸ್ಕೃತಿಕ ಶಕ್ತಿಯ ಪರಿಚಯವನ್ನು ಮಾಡಿ ಕೊಡುವಂತಿದೆ. ಅಂದರೆ, ಈಗ ದೆಹಲಿ ಕರ್ನಾಟಕ ಸಂಘ ಬರೀ 'ಕರ್ನಾಟಕ ಸಂಘ' ವಾಗದೇ ಒಂದು ಬಗೆಯ 'ಸಂಘಟನೆ'ಯಾಗಿ ರೂಪುಗೊಳ್ಳುತ್ತಿದೆ; ಬಹುಶಃ ರೂಪುಗೊಂಡಿದೆ. ಯಾವ ಬಗೆಯ 'ಸಂಘಟನೆ'ಯಿದು? ದೆಹಲಿ ಕರ್ನಾಟಕ ಸಂಘವು ಸಾಂಸ್ಕೃತಿಕ ಕೇಂದ್ರಬಿಂದುವಿನಿಂದ ಒಂದು 'ಸಂಘಟನೆ'ಯ ರೂಪ ತಾಳತೊಡಗಿದೆ. ಅದೊಂದು ಗಂಭೀರವಾದ ವಿಚಾರವನ್ನಾಗಿ ನಾವು ಪರಿಗಣಿಸಬೇಕು.

ಈ ದೃಷ್ಟಿಯಿಂದ ವಿಚಾರ ಮಾಡಿದರೆ, ನಾವು ಹೀಗೊಂದು ಪ್ರಶ್ನೆಯನ್ನು ಕೇಳಿಕೊಳ್ಳಬಹುದು? ಈಗ ನಮಗೆಲ್ಲ ದೆಹಲಿ ಕರ್ನಾಟಕ ಸಂಘ ಯಾಕೆ ಅತ್ಯಂತ ಪ್ರಿಯವಾಗಿದೆ? ಅದಕ್ಕೆ ಯಾಕೆ ಸದಸ್ಯರಾಗಬೇಕು? ಇನ್ನು ಕೆಲವರು ಅದರ ಸದಸ್ಯತ್ವದ ಬಗ್ಗೆ (ದೆಹಲಿಯಲ್ಲಿ ಹಾಗೂ ಅದರ ಆಸುಪಾಸಿನಲ್ಲಿದ್ದರೂ) ಯಾಕೆ ಕಿಂಚಿತ್ತೂ ಯೋಚಿಸುವುದಿಲ್ಲ? ಈ ಕುರಿತಾಗಿ ನಾವು ವಿಮರ್ಶೆ ಮಾಡಿಕೊಳ್ಳಬೇಕು. ನಮ್ಮೆಲ್ಲರ ದೆಹಲಿ ಕರ್ನಾಟಕ ಸಂಘ ಸಾಂಸ್ಕೃತಿಕ ಶಕ್ತಿ ಕೇಂದ್ರವಾಗದೇ, ಯಾವುದೋ ಸತ್ತೆಯ ಹಾಗೂ ರಾಜಕೀಯ ಶಕ್ತಿಯಾಗಿ ಬೆಳೆಯಬಹುದಾದ ಎಲ್ಲ ಸೂಚನೆಗಳೂ ಕಾಣುತ್ತಿವೆ. ಅದರ ಏರುತ್ತಿರುವ ಸದಸ್ಯ ಸಂಖ್ಯೆ. . .ದೆಹಲಿಯಲ್ಲಿರದವರ (ಕರ್ನಾಟಕದಲ್ಲೇ ಇರುವವರ) ಸದಸ್ಯತ್ವದ ಸಂಖ್ಯೆ ಅಂಕೆಯನ್ನು ಮೀರಿ ಬೆಳೆಯುತ್ತಿದೆ. ಒಂದು ಕಾಲದಲ್ಲಿ ಕನ್ನಡಿಗರನ್ನು ಅದರಲ್ಲೂ ದೆಹಲಿ ಕನ್ನಡಿಗರನ್ನು 'ಬನ್ನಿ ಬನ್ನಿ' ಎಂದು ಕರೆಯುತ್ತಿದ್ದ ಸಂಘ, ಈಗ ತನ್ನ ಭಾರವನ್ನು ಇಳಿಸಲು ಎಲ್ಲ ಪ್ರಯತ್ನವನ್ನು ಮಾಡಬೇಕಿದೆ. ಅದರ ಸಂವಿಧಾನದಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಮಾಡುವುದು ಅಗತ್ಯವಾಗಿದೆ. ಅದಕ್ಕೆ ಸಂವಿಧಾನ ತಿದ್ದುಪಡಿ ಸಮಿತಿ ಸನ್ನದ್ಧವಾಗುತ್ತಿದೆ.

ಇನ್ನೊಂದು ವಿಚಾರಕ್ಕೆ ಬರುವುದಾದರೆ-ದೆಹಲಿ ಕರ್ನಾಟಕ ಸಂಘ ಬರೀ 'ಸಾಹಿತ್ಯ-ಸಂಸ್ಕೃತಿ' ಎಂದುಕೊಂಡು ಹೊರಟರೆ ಏನೂ ಮಾಡಿದಂತಾಗುವುದಿಲ್ಲ ಎಂಬ ವಾದವನ್ನು ಒಪ್ಪಲೇಬೇಕು. 'ಸಾಹಿತ್ಯ-ಸಂಸ್ಕೃತಿ'ಗಳು ಸಂಘದ ಅವಿಭಾಜ್ಯ ಅಂಗಗಳೆಂಬುದನ್ನು ನಾವೆಲ್ಲ ಒಪ್ಪುತ್ತೇವೆ. ಹಾಗೆಯೇ, ಕನ್ನಡ ಕಲಿಸುವ ಪ್ರಯತ್ನಗಳು (ಅದೂ ಈ ರಾಜಧಾನಿಯಲ್ಲಿ) ಕನ್ನಡೇತರರಿಗೂ ಕನ್ನಡದ ಕಂಪನ್ನು ಮುಟ್ಟಿಸುವ ಪ್ರಯತ್ನಗಳು. . .'ಕನ್ನಡ. . .ಕರ್ನಾಟಕ'ವೆಂಬ 'ಬ್ರಾಂಡ್' ಅನ್ನು ದೆಹಲಿಯಲ್ಲಿ ನಿರ್ಮಿಸುವುದು-ಈ ಎಲ್ಲವನ್ನು ಮಾಡುವ ಜವಾಬ್ದಾರಿ ಈಗ ದೆಹಲಿ ಕರ್ನಾಟಕ ಸಂಘದ ಮೇಲಿದೆ. ಕರ್ನಾಟಕದ ಹಾಡು-ಕುಣಿತಗಳ ಜೊತೆ, ಅದರ ವಿಶಿಷ್ಟ ಊಟ-ತಿಂಡಿಗಳೂ ದೆಹಲಿಯಲ್ಲಿ ತುಂಬುವ ಹಾಗೆ ನಾವು ನೋಡಿಕೊಳ್ಳಬೇಕು. ಈ ಕುರಿತಾಗಿ ಹಲವಾರು ಸಲಹೆ-ಸೂಚನೆಗಳು ಬಂದಿವೆ. ಅವುಗಳೆಲ್ಲವನ್ನೂ ಗಮನಿಸಿಕೊಂಡು ನಾವು ನಮ್ಮೆಲ್ಲರ 'ಕನಸಿನ' ಕನ್ನಡ ಸಂಘವನ್ನು ಕಟ್ಟೋಣ.

ಈ ಕಟ್ಟುವಿಕೆಯಲ್ಲಿ. . .ಅಥವಾ ಕಟ್ಟುವ ಪ್ರಕ್ರಿಯೆಯಲ್ಲಿ ನಾವು ಬರೀ ನಮ್ಮ ಛಾಪನ್ನು ಮೂಡಿಸುವದರತ್ತ ಗಮನ ಹರಿಸಿದರೆ ಏನೇನೂ ಪ್ರಯೋಜನವಿಲ್ಲ. ಒಂದು ಬಗೆಯ ಸಾಂಸ್ಥಿಕವಾದ ಹಾಗೂ ಪ್ರಜಾಸತ್ತಾತ್ಮಕವಾದ ಚೌಕಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘ ಕೆಲಸ ಮಾಡುತ್ತ ಸಾಗಬೇಕು. ಎಲ್ಲ ನಿಶ್ಚಯಗಳು ಹಾಗೂ ನಿರ್ಧಾರಗಳನ್ನು ಸಾಂಸ್ಥಿಕ ಚೌಕಟ್ಟಿನಲ್ಲೇ ಎಲ್ಲರೂ ನೋಡುವಂತಾಗಬೇಕು. ದೆಹಲಿ ಕರ್ನಾಟಕ ಸಂಘವೆಂಬುದು ಹಣ ಮಾಡಲು, ಧನವನ್ನು ಕ್ರೋಡಿಕರಿಸಲು ಮಾತ್ರ ಕಟ್ಟಿಕೊಂಡ ಸಂಸ್ಥೆಯಲ್ಲ. ಏನೇ ಆದರೂ ಭದ್ರವಾದ ಆರ್ಥಿಕ ಬುನಾದಿಯನ್ನು ಹಾಕಿಕೊಂಡು ಸಂಘ ಮುಂದುವರೆಯುವ ಅಗತ್ಯವಿದೆ. ಯಾವುದೇ ಬಗೆಯ ಆಮಿಷಗಳಿಗೆ ನಾವು ಪಕ್ಕಾಗದೇ, ಸಂಘವನ್ನು ಮುಂದುವರೆಸಿಕೊಂಡು ಹೋದರೆ, ನಮ್ಮೆಲ್ಲರ ಹಾಗೂ ನಮ್ಮ ಹಿಂದಿನ ಪೀಳಿಗೆಗಳ ದೆಹಲಿ ಕನ್ನಡಿಗರ 'ಕನಸಿನ ಕನ್ನಡ ಸಂಘ'ವು ಸಾಕಾರವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

❑ ಡಾ. ವೆಂಕಟಾಚಲ ಹೆಗಡೆ

## ಉಚಿತ ವೈದ್ಯಕೀಯ ತಪಾಸಣೆ

ಮೇ ತಿಂಗಳ 29ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

# ಮುನ್ನೋಟ

ಇತ್ತೀಚೆಗೆ ನಡೆದ ರಾಷ್ಟ್ರಕವಿ ಕುವೆಂಪು ಸಮಗ್ರ ನೋಟ–ಕುವೆಂಪು ಸಾಹಿತ್ಯದ ರಾಷ್ಟ್ರೀಯ ವಿಚಾರ ಸಂಕಿರಣ ಒಂದು ಅತ್ಯುತ್ತಮವಾದ ಕಾರ್ಯಕ್ರಮವಾಗಿತ್ತು. ಮೂರು ದಿನಗಳ ಈ ಕಾರ್ಯಕ್ರಮದಲ್ಲಿ ಪ್ರತಿದಿನ ಬೆಳಿಗ್ಗೆಯಿಂದ ರಾತ್ರಿಯವರೆಗೆ ವೈವಿಧ್ಯಮಯ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ. ಸಂಘದ ಸಭಾಂಗಣದಲ್ಲಿ ಅನೇಕ ಪ್ರಮುಖ ಲೇಖಕರು ಸೇರಿದ್ದು ಅದರಲ್ಲಿ ಪ್ರೊ. ಹಂಪ. ನಾಗರಾಜಯ್ಯ, ಶ್ರೀಮತಿ ಕಮಲಾ ಹಂಪನಾ, ಪ್ರೊ. ಪ್ರಭುಶಂಕರ್, ಪ್ರೊ.ಎಂ.ಎಚ್.ಕೃಷ್ಣಯ್ಯ, ಪ್ರೊ. ಪ್ರಧಾನ ಗುರುದತ್ತ, ಪ್ರೊ. ಎಚ್.ಎಸ್. ಶಿವಪ್ರಕಾಶ್, ಡಾ.ಎ. ಮುರಿಗೆಪ್ಪ, ಪ್ರೊ. ಶಿವರಾಮ ಕಾಡನಕುಪ್ಪೆ, ಡಾ. ಚಂದ್ರಶೇಖರ ನಂಗಲಿ, ಡಾ.ಕೆ. ಪುಟ್ಟಸ್ವಾಮಿ, ಡಾ.ಟಿ. ಎಸ್. ಸತ್ಯನಾಥ್, ಪ್ರೊ. ಲಿಂಗದೇವರು ಹಳೆಮನೆ, ಡಾ.ಕೆ.ವೈ ನಾರಾಯಣ ಸ್ವಾಮಿ, ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಡಾ. ಕರೀಗೌಡ ಬೀಚನಹಳ್ಳಿ ಇನ್ನು ಮುಂತಾದ ಗಣ್ಯ ವ್ಯಕ್ತಿಗಳು ಸಂಘದ ಸಭಾಂಗಣದಲ್ಲಿ ಈ ಮೂರು ದಿನಗಳ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವುದು ಕರ್ನಾಟಕ ಸಂಘಕ್ಕೆ ಹೆಮ್ಮೆಯ ವಿಷಯ. ಅವರಿಗೆ ನಮ್ಮ ಆತ್ಮೀಯ ಕೃತಜ್ಞತೆಗಳು. ಮೂರು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಒಂದು ರೀತಿಯಲ್ಲಿ ಕರ್ನಾಟಕವೇ ಸಂಘದಲ್ಲಿ ಇದ್ದಂತಿತ್ತು. ಈ ಮೂರೂ ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ ಖ್ಯಾತ ಗಾಯಕಿ ಶ್ರೀಮತಿ ರತ್ನಮಾಲಾ ಪ್ರಕಾಶ್ ಹಾಗೂ ಸಂಗೀತ ನಿರ್ದೇಶಕ ಎಸ್.ಎಸ್. ಪ್ರಸಾದ್ 70 ಜನ ದೆಹಲಿ ಕನ್ನಡಿಗರಿಗೆ ಕುವೆಂಪು ಅವರ ಗೀತೆಗಳ ಸಂಗೀತ ತರಬೇತಿ ನೀಡಿ ಪ್ರಸ್ತುತಪಡಿಸಿದ್ದು ಕಾರ್ಯಕ್ರಮಕ್ಕೆ ಮೆರಗು ತಂದಿತ್ತು. ಸಂಗೀತ ತರಬೇತಿ ನೀಡಿದ ಶ್ರೀಮತಿ ರತ್ನಮಾಲಾ ಪ್ರಕಾಶ್ ಮತ್ತು ಶ್ರೀ ಎಸ್.ಎಸ್. ಪ್ರಸಾದ್ ಅವರಿಗೆ ಹಾಗೂ ಭಾಗವಹಿಸಿದ ಎಲ್ಲಾ ಕಲಾವಿದರುಗಳಿಗೆ ನಮ್ಮ ಅಭಿನಂದನೆಗಳು. ಈ ಮೂರೂ ದಿನಗಳ ಕಾರ್ಯಕ್ರಮದಲ್ಲಿ ಸುಮಾರು 300 ರಿಂದ 350 ಜನ ಕನ್ನಡಿಗರು ಭಾಗವಹಿಸಿದ್ದರು.

ಕರ್ನಾಟಕ ಸರಕಾರದಿಂದ ಒಂದು ಕೋಟಿ ರೂ ಅನುದಾನ ನೀಡಲು ಸಹಕರಿಸಿದ್ದ ಮಾಜಿ ಕೇಂದ್ರ ಸಚಿವ ಹಾಗೂ ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಶ್ರೀ ಧನಂಜಯ ಕುಮಾರ್ ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದಾಗ ಮುಂದಿನ ವರ್ಷವೂ ಕೂಡ ಸಹಾಯಧನ ಕೊಡಿಸುವ ಭರವಸೆ ನೀಡಿ ನಮಗೆ ಉತ್ತಮ ಕಾರ್ಯಕ್ರಮಗಳನ್ನು ಮಾಡಲು ಉತ್ತೇಜಿಸಿದ್ದಾರೆ. ದೆಹಲಿ ಕರ್ನಾಟಕ ಸಂಘವು ಈ ಮೂಲಕ ಅವರಿಗೂ ಕೃತಜ್ಞತೆಯನ್ನು ಅರ್ಪಿಸುತ್ತಿದೆ.

❑ ಸಿ.ಎಂ.ನಾಗರಾಜ

ಅರಳು ಪ್ರತಿಭೆ

## ಕು. ನವನಿ ನಾಯಕ್ ಭರತ ನಾಟ್ಯ ರಂಗಪ್ರವೇಶ



ದೆಹಲಿಯ ಚಿನ್ಮಯ ವಿದ್ಯಾಲಯದಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಪಡೆಯುತ್ತಿರುವ ಕು. ನವನಿ ನಾಯಕ್ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವು ದೆಹಲಿ ತಮಿಳು ಸಂಘದಲ್ಲಿ ಏಪ್ರಿಲ್ 9ರಂದು ಜರುಗಿತು. ತನ್ನ ಏಳನೆಯ ವಯಸ್ಸಿನಿಂದಲೇ ಗಣೇಶ ನೃತ್ಯಾಲಯದ ಗುರು ಪದ್ಮಶ್ರೀ ಸರೋಜ ವೈದ್ಯನಾಥನ್ ಅವರ ಬಳಿ ನೃತ್ಯಾಭ್ಯಾಸ ಪಡೆದ ಕು. ನವನಿ ನಾಯಕ್ ಅವರ ಲಯಬದ್ಧ ನೃತ್ಯಾಭಿನಯ ಪ್ರೇಕ್ಷಕರ ಮನಸೆಳೆಯಿತು. ಇವರ "ರಾಮಾಯಣ ಶಬ್ದಂ" ನೃತ್ಯರೂಪಕ ಅಪಾರ ಮೆಚ್ಚುಗೆ ಗಳಿಸಿತು. ಕುದುರೆ ಸವಾರಿಯಲ್ಲಿ ಪರಿಣಿತರಾದ ನವನಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಅಮೇರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ನಿರ್ದೇಶಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯುವ ಕಲಾವಿದೆ ನವನಿಗೆ ಶುಭ ಹಾರೈಸಿದರು. ನಾಯಕ್ ಏವಿಯೇಶನ್ ಮಾಲೀಕ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಅರವಿಂದ ನಾಯಕ್ ಮತ್ತು ಶ್ರೀಮತಿ ಆರತಿಯವರ ಸುಪುತ್ರಿ ನವನಿ ನಾಯಕ್ ಅವರ ಕಲಾಪ್ರತಿಭೆ ಮತ್ತಷ್ಟು ಪರಿಪೂರ್ಣತೆ ಹೊಂದಿ, ರಾಷ್ಟ್ರಮಟ್ಟಕ್ಕೆ ಬೆಳಗಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಕೋರುತ್ತೇವೆ.

## ಕು. ಚಂದನ ಭರತ ನಾಟ್ಯ ರಂಗಪ್ರವೇಶ



ದೆಹಲಿಯ ಹೋಲಿ ಚೈಲ್ಡ್ ಆಕ್ಸಿಲಿಯಮ್ ಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕು. ಚಂದನ ಎಸ್. ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಏಪ್ರಿಲ್ 14ರಂದು ಯಶಸ್ವಿಯಾಗಿ ನಡೆಯಿತು. ತನ್ನ ಎಳೆಯ ವಯಸ್ಸಿನಿಂದಲೇ ಗಣೇಶ ನೃತ್ಯಾಲಯದ ಗುರು ಪದ್ಮಶ್ರೀ ಸರೋಜ ವೈದ್ಯನಾಥನ್ ಅವರಿಂದ ನೃತ್ಯ ತರಬೇತಿ ಪಡೆದ ಚಂದನ ತನ್ನ ಭಾವಪೂರ್ಣ ನೃತ್ಯಾಭಿನಯದಿಂದ ಪ್ರೇಕ್ಷಕರ ಅಪಾರ ಪ್ರಶಂಸೆಗೆ ಸಪಾತ್ರರಾದರು. ಶಾಲೆಯಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬಹುಮಾನ ವಿಜೇತಳಾದ ಚಂದನ ಸಂಗೀತ ವಿದುಷಿ ಶ್ರೀಮತಿ ಜಲಜರಾಜು ಅವರಿಂದ ಕರ್ನಾಟಕ ಸಂಗೀತಾಭ್ಯಾಸವನ್ನು ಪಡೆಯುತ್ತಿದ್ದಾಳೆ. ಕರ್ನಾಟಕ ಭವನದ ಸಿಬ್ಬಂದಿ ಎಸ್.ಎನ್. ಮಂಜೇಗೌಡ ಮತ್ತು ಶ್ರೀಮತಿ ಪುಷ್ಪವತಿ ಅವರ ಸುಪುತ್ರಿ ಕು. ಚಂದನ ಅವರಿಗೆ ನೃತ್ಯದಲ್ಲಿ ಅಪಾರ ಒಲವು. ಚಂದನ ಅವರು ನೃತ್ಯ ಕ್ಷೇತ್ರದಲ್ಲಿ ಇನ್ನೂ ಯಶಸ್ಸು ಸಾಧಿಸಲಿ, ಅವರ ಭವಿಷ್ಯ ಉಜ್ವಲವಾಗಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರೈಸುತ್ತೇವೆ.

# 21ನೇ ಶತಮಾನಕ್ಕೆ ಬಸವ ಧರ್ಮ



ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳು 21ನೇ ಶತಮಾನಕ್ಕೆ ಭಾರಿ ದೊಡ್ಡ ಸವಾಲುಗಳಾಗಿ ನಿಂತಿವೆ. ಈ ಭೇದಗಳಲ್ಲದೆ ಭಯೋತ್ಪಾದನೆ, ಜನಾಂಗಹತ್ಯೆ, ಯುದ್ಧ, ನಿರುದ್ಯೋಗ, ಆರ್ಥಿಕ ಹಿಂಜರಿತ, ಕೊಲೆ, ಸುಲಿಗೆ, ಅತ್ಯಾಚಾರ, ಹಸಿವು, ಬಡತನ, ಮಾನಸಿಕ ಒತ್ತಡ ಮತ್ತು ಪರಿಸರ ಸಮಸ್ಯೆಗಳು ಇಡೀ ವಿಶ್ವವನ್ನು ಕಾಡುತ್ತಿವೆ. ಜನಾಂಗಗಳ ಮತ್ತು ದೇಶಗಳ ಮಧ್ಯೆ ಅಪನಂಬಿಕೆ ಹೆಚ್ಚುತ್ತಿದೆ. ಮಾನವೀಯತೆ, ಜೀವಕಾರುಣ್ಯ ಮತ್ತು ಎಲ್ಲ ಜನಾಂಗಗಳ ಬಗೆಗಿನ ಪ್ರೇಮಭಾವ ಕಡಿಮೆಯಾಗುತ್ತ ದ್ವೇಷ ಬೆಳೆಯುತ್ತಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ವಿಶ್ವಮಾನ್ಯವಾದ ಬಸವಣ್ಣನವರ ಚಿಂತನೆಗಳು, ಜಗತ್ತನ್ನು ಎಲ್ಲ ಅನಿಷ್ಟಗಳಿಂದ ಮುಕ್ತಗೊಳಿಸುವ ಶಕ್ತಿಯನ್ನು ಹೊಂದಿವೆ.

ಭೌತಿಕ ಜಗತ್ತಿನ ಕಾಳಜಿಯೊಂದಿಗೆ ಆಧ್ಯಾತ್ಮಿಕ ಜಗತ್ತಿನ ಕಡೆಗೆ ಸಾಗುವುದು. ಭೌತಿಕ ಜಗತ್ತಿನ ಅನುಭವದ ಮೂಲಕ ಆಧ್ಯಾತ್ಮಿಕ ಜಗತ್ತಿನ ಅನುಭಾವ ಪಡೆಯುವುದು. ಸಂಸಾರದಲ್ಲಿ ಇದ್ದುಕೊಂಡೇ ಸದ್ಗತಿಯನ್ನು ಹೊಂದುವುದು. ಸಮಾಜಸೇವೆಯ ಮೂಲಕ ದೇವರಲ್ಲಿ ನಿಷ್ಠೆಯನ್ನು ಹೊಂದುವುದು. ಎಲ್ಲ ಧರ್ಮಗಳ ಜನರ ಬಗ್ಗೆ ಮತ್ತು ಎಲ್ಲ ಪಶು ಪಕ್ಷಿ ಮುಂತಾದ ಜೀವಿಗಳ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುವುದು. ಪರಿಸರ ಸಮತೋಲನವನ್ನು ಕಾಪಾಡುವುದು. ದೇಶ, ಭಾಷೆ, ಜಾತಿ, ಧರ್ಮ ಮತ್ತು ಜನಾಂಗಗಳ ಮಧ್ಯೆ ಮಾನವೀಯ ಸಂಬಂಧಗಳನ್ನು ಬೆಳೆಸುವುದು. "ಒಬ್ಬನೇ ದೇವರು, ಒಂದೇ ವಿಶ್ವ ಮತ್ತು ಒಂದೇ ಮಾನವ ಜನಾಂಗ" ಎಂಬ ಸತ್ಯವನ್ನು ಸಾರುವುದು ಲಿಂಗವಂತ ಧರ್ಮ ಎಂಬ ಬಸವಧರ್ಮದ ಗುರಿಯಾಗಿದೆ.

ಬಸವಣ್ಣನವರು 12ನೇ ಶತಮಾನದಲ್ಲೇ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದರು. ಸಮಾಜೋಧಾರ್ಮಿಕ ಸಂಸತ್ತು ಎಂದು ಕರೆಯಿಸಿಕೊಳ್ಳುವ ಅನುಭವ ಮಂಟಪವನ್ನು ಸ್ಥಾಪಿಸಿದರು. ಈ ಅನುಭವ ಮಂಟಪದಲ್ಲಿ ಎಲ್ಲ ಕಾಯಕ ಜೀವಿಗಳ 770 ಪ್ರತಿನಿಧಿಗಳಿದ್ದರು. ಕಸಗುಡಿಸುವವರ, ತೊಗಲು ಹದ ಮಾಡುವವರ, ಪಾದರಕ್ಷೆಗಳನ್ನು ಹೊಲಿಯುವವರ, ದೋಣಿ ನಡೆಸುವವರ, ಬಟ್ಟೆ ಒಗೆಯುವವರ, ಹುಲ್ಲು ಮಾರುವವರ, ರೈತರ, ನೇಕಾರರ, ಕ್ಷೌರಿಕರ, ಬಡಗಿಗಳ, ವೈದ್ಯರ, ದನ ಕಾಯುವವರ, ಕಟ್ಟಿಗೆ ಮಾರುವವರ, ಕಮ್ಮಾರರ, ಕುಂಬಾರರ, ಅಕ್ಕಸಾಲಿಗರ, ಕುರುಬರ, ಬುಟ್ಟಿ ಹೆಣೆಯುವವರ, ವಾದ್ಯಗಳನ್ನು ನುಡಿಸುವವರ, ಬೀದಿನಾಟಕ ಮಾಡುವವರ, ಸಮಾಜದ ಕಟ್ಟಕಡೆಯಲ್ಲಿದ್ದು ಕಡುಬಡತನದಲ್ಲಿ ಜೀವನ ಸಾಗಿಸುವ ದಲಿತರ... ಹೀಗೆ ಹಲವು ಹದಿನೆಂಟು ರೀತಿಯ ಕಾಯಕ ಮಾಡುವವರ ಪ್ರತಿನಿಧಿಗಳಿಂದ ಅನುಭವ ಮಂಟಪ ಕಂಗೊಳಿಸುತ್ತಿತ್ತು. ಈ ಅನುಭವ ಮಂಟಪದಲ್ಲಿ ಎಲ್ಲ ಮಹಿಳಾ ಮತ್ತು ಪುರುಷ ಪ್ರತಿನಿಧಿಗಳಿಗೆ ಸಮಾನ ಅವಕಾಶವಿತ್ತು. ಎಲ್ಲರಿಗೂ ಮಾತನಾಡುವ ಹಕ್ಕಿತ್ತು. 12ನೇ ಶತಮಾನಕ್ಕೆ ಮೊದಲು ಇಂಥ ಒಂದು ಪ್ರಜಾಪ್ರಭುತ್ವದ ಬೃಹತ್ ಪ್ರಯೋಗ ಜಗತ್ತಿನ ಯಾವ ಮೂಲೆಯಲ್ಲೂ ನಡೆದಿಲ್ಲ ಎಂಬುದು ಗಮನಾರ್ಹವಾಗಿದೆ.

12ನೇ ಶತಮಾನದಲ್ಲಿ ಕೆಳವರ್ಗದ ಜನರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ಪಡೆಯುವ ಹಕ್ಕು ಇದ್ದಿದ್ದಿಲ್ಲ. ಬಸವಣ್ಣನವರು ಇಂಥ ಅಕ್ಷರ ವಂಚಿತರಿಗೆ ಅಕ್ಷರ ಜ್ಞಾನ ನೀಡಿ, ಅವರು ಕೂಡ ವಚನಗಳನ್ನು ಬರೆದು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವಂಥ ವಾತಾವರಣವನ್ನು ಸೃಷ್ಟಿಸಿದರು. ಮಹಿಳೆ ಮತ್ತು ಪುರುಷರಿಗಾಗಿ ಈ ರೀತಿಯ ವಯಸ್ಕರ ಶಿಕ್ಷಣ ವ್ಯವಸ್ಥೆ ಜಗತ್ತಿನಲ್ಲಿ ಹಿಂದೆ ಎಲ್ಲಿಯೂ ಇದ್ದಿದ್ದಿಲ್ಲ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯಲ್ಲಿನ ಎಲ್ಲ 30 ಅಂಶಗಳೂ ಬಸವಣ್ಣನವರ ವಚನಗಳಲ್ಲಿ ಇವೆ. ಆ ಮೂಲಕ ಆಧುನಿಕ ಮಾನವನ ಆಶಯಗಳನ್ನು ಈಡೇರಿಸುವ ಶಕ್ತಿಯನ್ನು ಹೊಂದಿವೆ. ಬಡವರ ಮತ್ತು ಮಹಿಳೆಯರ ಹಕ್ಕಿಗಾಗಿ ಅಷ್ಟೇ ಅಲ್ಲದೆ ಅನೈತಿಕ ಸಂಬಂಧದಿಂದ ಹುಟ್ಟಿದ ಮಗುವಿನ ಹಕ್ಕಿಗಾಗಿಯೂ ಅವರು ಧ್ವನಿ ಎತ್ತಿದ್ದಾರೆ.

ಬಸವಣ್ಣನವರಿಗೆ ಇಷ್ಟಲಿಂಗಪೂಜೆ ಎಂಬುದು ಮಾನವ ಹಕ್ಕುಗಳ ಪ್ರಜ್ಞೆಯನ್ನು ಹೊಂದುವ ಸಾಧನವಾಗಿದೆ. ಮಾನವ ಏಕತೆಯನ್ನು ಸಾಧಿಸುವ ಕ್ರಮವಾಗಿದೆ.

> **"ಲಿಂಗವ ಪೂಜಿಸಿ ಫಲವೇನಯ್ಯಾ,**
> **ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?**
> **ಲಿಂಗವ ಪೂಜಿಸಿ ಫಲವೇನಯ್ಯಾ,**
> **ಕೂಡಲಸಂಗಮದೇವರ ಪೂಜಿಸಿ**
> **ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?"**

ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. 21ನೇ ಶತಮಾನದ ಜಗತ್ತು ಕೂಡ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳಿಂದ ಮುಕ್ತವಾಗಿಲ್ಲ. ಜಗತ್ತಿನ ಎಲ್ಲ ಜನಾಂಗಗಳ ಮಧ್ಯೆ ಸಾಮರಸ್ಯ ಮೂಡಿಲ್ಲ. ಈ ಎಲ್ಲ ಸಮಸ್ಯೆಗಳಿಂದಾಗಿ ಜಗತ್ತಿನ ಜನರು ಜನಾಂಗದ್ವೇಷ, ಕೊಲೆ, ಸುಲಿಗೆ ಮತ್ತು ಅಪನಂಬಿಕೆಗಳಿಗೆ ಬಲಿಯಾಗುತ್ತಲೇ ಇರುತ್ತಾರೆ. ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಲೇ ಇರುತ್ತಾರೆ. ಇಂಥ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದೇ ಇಷ್ಟಲಿಂಗ ಪೂಜೆಯ ಉದ್ದೇಶವಾಗಿದೆ. ಬರಿ ಲಿಂಗಪೂಜೆ ಮಾಡುತ್ತ ಇಂಥ ಸಮಸ್ಯೆಗಳ ಬಗ್ಗೆ ಗಮನ ಹರಿಸದಿದ್ದರೆ ಮತ್ತು ಅವುಗಳ ನಿವಾರಣೆಗಾಗಿ ಪ್ರಯತ್ನಿಸದಿದ್ದರೆ ಇಷ್ಟಲಿಂಗಪೂಜೆ ಮಾಡುವುದು ವ್ಯರ್ಥ ಎಂಬುದನ್ನು ಬಸವಣ್ಣನವರು ಸ್ಪಷ್ಟಪಡಿಸುತ್ತಾರೆ.

ಸಮರತಿ ಎಂದರೆ ಸತಿ ಮತ್ತು ಪತಿ ಸಮಾನ ಹಕ್ಕು, ಗೌರವ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ಹೊಂದಿ, ಲಿಂಗಭೇದವನ್ನು ಅಳಿಸಿ, ಪರಸ್ಪರ ಕಾಳಜಿಯೊಂದಿಗೆ ಎಲ್ಲರೂ ಒಂದಾಗಿ ಬದುಕುವುದು. ಹೀಗೆ ಬಸವಣ್ಣನವರು ಲಿಂಗಭೇದ ನೀತಿಯನ್ನು ವಿರೋಧಿಸುತ್ತಾರೆ.

ಸಮಕಳೆ ಎಂದರೆ ಪ್ರತಿಯೊಬ್ಬ ಮಾನವನಿಗೂ ಸಮನಾದ ತೇಜಸ್ಸು ಇರುವುದು. ಬ್ರಾಹ್ಮಣರಿಗೆ ಬ್ರಹ್ಮತೇಜಸ್ಸು ಮತ್ತು ಕ್ಷತ್ರಿಯರಿಗೆ ಕ್ಷಾತ್ರ ತೇಜಸ್ಸು ಎಂಬುದು ಇರುವುದಿಲ್ಲ. ಕೆಳಜಾತಿಯವರಿಗೆ ಮತ್ತು ಮೇಲ್ಜಾತಿಯವರಿಗೆ ಒಂದೇ ರೀತಿಯ ಮಾನವ ತೇಜಸ್ಸು ಇರುತ್ತದೆ. ಎಲ್ಲ ಮಾನವರು ಸಮಾನರಾಗಿದ್ದಾರೆ. ಜಾತಿ. ಕುಲ ಮತ್ತು ಧರ್ಮಗಳಿಂದ ಯಾರೂ ಮೇಲು ಮತ್ತು ಕೀಳು ಆಗುವುದಿಲ್ಲ. ಹೀಗೆ ಬಸವಣ್ಣನವರು ವರ್ಣಭೇದ ನೀತಿಯನ್ನು ವಿರೋಧಿಸುತ್ತಾರೆ.

ಸಮಸುಖ ಎಂದರೆ ಶ್ರೀಮಂತರು ಮತ್ತು ಬಡವರಿಗೆ ಒಂದೇ ತೆರನಾದ ಬದುಕು ಇರುತ್ತದೆ. ಶ್ರೀಮಂತರಿಗೆ ಒಂದು ರೀತಿಯ ಸುಖ ಮತ್ತು ಬಡವರಿಗೆ ಒಂದು ರೀತಿಯ ಸುಖ ಇರುವುದಿಲ್ಲ. ಎಲ್ಲ ಜೀವಗಳೂ ನೆಮ್ಮದಿಯಿಂದ ಬದುಕಲು ಬಯಸುತ್ತವೆ. ಈ ಭೂಮಿಯ ಮೇಲೆ ಬೇರೆಯವರಿಗೆ ತೊಂದರೆ ಕೊಡದೆ, ದುಡಿದು ಸುಖವಾಗಿ ಬದುಕುವ ಹಕ್ಕನ್ನು ಪ್ರತಿಯೊಬ್ಬರೂ ಪಡೆದಿದ್ದಾರೆ. ಬೇರೆಯವರ ಶೋಷಣೆ ಮಾಡುವ ಹಕ್ಕನ್ನು ಯಾರೂ ಪಡೆದಿಲ್ಲ ಎಂದು ಬಸವಣ್ಣನವರು ವರ್ಗಭೇದ ನೀತಿಯನ್ನು ವಿರೋಧಿಸುತ್ತಾರೆ.

ಎಲ್ಲ ಮಾನವರು ಪ್ರೇಮಭಾವದೊಂದಿಗೆ, ನದಿಯೊಳಗೆ ನದಿ ಬೆರೆತ ಹಾಗೆ ಒಂದಾಗಿ ಬದುಕಬೇಕು. ಯಾರೂ ಹೆಚ್ಚಿನವರಲ್ಲ ಯಾರೂ ಕಡಿಮೆಯಲ್ಲ. ಎಲ್ಲರೂ ಸಮಾನರು. ಆದ್ದರಿಂದ ಎಲ್ಲ ಜಾತಿ, ಜನಾಂಗ ಮತ್ತು ಧರ್ಮದವರು ಸೇರಿ ಒಂದಾಗಿ ಬದುಕಬೇಕು. ಇಂಥ ಪ್ರಜ್ಞೆಯನ್ನು ಮೂಡಿಸುವುದೇ ಇಷ್ಟಲಿಂಗ ಪೂಜೆಯ ಉದ್ದೇಶವಾಗಿದೆ. ಒಂದು ವೇಳೆ ಇಷ್ಟಲಿಂಗ ಪೂಜಕರು ಈ ರೀತಿಯ ಪ್ರಜ್ಞೆಯನ್ನು ಬೆಳೆಸಿಕೊಳ್ಳದಿದ್ದರೆ ಮಾನವ ಏಕತೆ ಸಾಧಿಸಲಿಕ್ಕಾಗದು. ಆಗ ಇಷ್ಟಲಿಂಗ ಪೂಜೆಯ ಉದ್ದೇಶ ಈಡೇರದು. ಹೀಗೆ ನಿರರ್ಥಕ ಪೂಜೆ ಮಾಡಬೇಕಿಲ್ಲ ಎಂದು ಎಚ್ಚರಿಸುತ್ತಾರೆ.

ಬಸವಣ್ಣನವರ ಆಶಯದಂತೆ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳನ್ನು ಅಳಿಸಿಹಾಕಿ, ನದಿಯೊಳಗೆ ನದಿ ಕೂಡುವ ಹಾಗೆ ಎಲ್ಲ ದೇಶಗಳ ಮತ್ತು ಎಲ್ಲ ಧರ್ಮಗಳ ಮಾನವರ ಏಕತೆಯನ್ನು ಸಾಧಿಸಿದಾಗ ಜಗತ್ತಿನಲ್ಲಿ ಶೋಷಣೆ ಎಂಬುದು ಇರುವುದಿಲ್ಲ. ಯುದ್ಧಗಳು ಇರುವುದಿಲ್ಲ. ಜನಾಂಗಹತ್ಯೆ ಇರುವುದಿಲ್ಲ. ಇಂಥ ಒಂದು ವ್ಯವಸ್ಥೆಯ ಕನಸನ್ನು ಬಸವಣ್ಣನವರು ಕಂಡಿದ್ದರು.

ಬಸವಣ್ಣನವರು ಕಲ್ಯಾಣ ರಾಜ್ಯದ ಪ್ರಧಾನಿಯಾಗಿದ್ದ ಅವಧಿಯಲ್ಲಿ ಒಂದು ಯುದ್ಧವೂ ನಡೆಯಲಿಲ್ಲ. "ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ" ಎಂದು ಬಸವಣ್ಣನವರೇ ಹೇಳಿದ್ದಾರೆ. "ಬಸವ ರಾಜ್ಯದ ಸಿರಿಯು, ಬಸವ ಬಡವರ ನಿಧಿಯು" ಎಂದು ಆ ಕಾಲದ ಜನಪದ ಕವಿಯೊಬ್ಬ ಹಾಡಿದ್ದಾನೆ. ಬಸವಣ್ಣನವರು ಪ್ರಧಾನಿಯಾಗಿದ್ದಾಗ ಕಾಯಕಕ್ಕೆ ಬಹಳಷ್ಟು ಮಹತ್ವ ನೀಡಿದರು. ಜನರು ಕಾಯಕದಲ್ಲಿ ತಲ್ಲೀನರಾಗಿ ಯೋಗ್ಯರೀತಿಯಲ್ಲಿ ಉತ್ಪಾದನೆ ಮಾಡಿದರು. ಯಾರಿಗೂ ಬೇಡದೆ ಬದುಕುವ ಸಾಮರ್ಥ್ಯವನ್ನು ಪಡೆದರು. ಜನರೆಲ್ಲ ಚೆನ್ನಾಗಿ ಉತ್ಪಾದನೆಯಲ್ಲಿ ತೊಡಗಿದ್ದರಿಂದ ರಾಜ್ಯದ ಭಂಡಾರವೂ ತುಂಬಿತು. ಹೀಗೆ ಬಸವಣ್ಣನವರು ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಸದ್ಬಳಕೆಯೊಂದಿಗೆ ಸಮಾನತೆಯಿಂದ ಕೂಡಿದ ಸುಂದರ ಸಮಾಜವನ್ನು ನಿರ್ಮಿಸಿದರು. ಇಂಥ ಒಂದು ಸಮಾಜ ಮಧ್ಯ ಯುಗದ ಅದ್ವಿತೀಯ ಸಮಾಜವಾಗಿತ್ತು.

ಜಗಜ್ಯೋತಿ ಬಸವಣ್ಣನವರು ಮಹಾನ್ ಮಾನವತಾವಾದಿಗಳಾಗಿದ್ದರು. ಮಹಾನ್ ಆಡಳಿತಗಾರರಾಗಿದ್ದರು. ಮಹಾನ್ ಸಾಮಾಜಿಕ ಮನೋವಿಜ್ಞಾನಿಗಳಾಗಿದ್ದರು. ಮಹಾನ್ ಅರ್ಥಶಾಸ್ತ್ರಜ್ಞರಾಗಿದ್ದರು. ಮಹಾನ್ ಸಾಹಿತಿಗಳಾಗಿದ್ದರು. ಮಹಾನ್ ಭಾಷಾ ಪಂಡಿತರಾಗಿದ್ದರು. ಬದುಕಿನ ಎಲ್ಲ ರಂಗಗಳಲ್ಲಿ ಮಹಾಜ್ಞಾನಿಗಳಾಗಿದ್ದರು. ಮಹಾನ್ ದಾರ್ಶನಿಕರಾಗಿದ್ದರು.

ಅವರಿಗೆ ಇಡೀ ಸಮಾಜ ವ್ಯವಸ್ಥೆಯ ಕಲ್ಪನೆ ಇತ್ತು. ಒಂದು ಹೊಸ ಸಮಾಜ ಹೇಗೆ ಇರಬೇಕು ಎಂಬುದರ ಪ್ರಜ್ಞೆ ಇತ್ತು. ಅವರು ಧರ್ಮ, ಸಮಾಜ, ಸಂಸ್ಕೃತಿ ಮತ್ತು ಅರ್ಥಶಾಸ್ತ್ರವನ್ನು ಬೇರೆಬೇರೆಯಾಗಿ ನೋಡಲಿಲ್ಲ, ಕುಟುಂಬ, ಸಮಾಜ, ದೇಶ ಮತ್ತು ಜಗತ್ತನ್ನು ಬೇರೆಬೇರೆಯಾಗಿ ನೋಡಲಿಲ್ಲ. ಇವೆಲ್ಲವುಗಳ ಮಧ್ಯದ ಘನವಾದ ಸಂಬಂಧವನ್ನು ಗುರುತಿಸಿದರು. ಇವೆಲ್ಲವುಗಳ ಒಟ್ಟು ಅಭಿವೃದ್ಧಿಯಿಂದ ಮಾತ್ರ ಮಾನವರನ್ನು ಎಲ್ಲ ಬಂಧನಗಳಿಂದ ವಿಮೋಚನೆಗೊಳಿಸಬಹುದು ಎಂಬುದನ್ನು ಅವರು ಬಹುಬೇಗ ಕಂಡುಕೊಂಡರು.

ಮಾನವ ಸಂಪನ್ಮೂಲ ಮತ್ತು ನೈಸರ್ಗಿಕ ಸಂಪನ್ಮೂಲಗಳ ಯೋಗ್ಯ ಬಳಕೆಯಿಂದ ಜನೋಪಯೋಗಿ ವಸ್ತುಗಳ ಉತ್ಪಾದನೆ ಮಾಡಬೇಕು. ಇದೇ ಕಾಯಕ ತತ್ವ ವಸ್ತುಗಳನ್ನು ಹಿತಮಿತವಾಗಿ ಬಳಸುವುದು ಪ್ರಸಾದ ತತ್ವ ನಮ್ಮ ಸಂಪತ್ತಿನ ಮೂಲಕ ಸಮಾಜಸೇವೆ ಮಾಡುವುದು ದಾಸೋಹ ತತ್ವ.

ಹೀಗೆ ಕಾಯಕ, ಪ್ರಸಾದ ಮತ್ತು ದಾಸೋಹ ತತ್ವಗಳಲ್ಲಿ ನಿಸರ್ಗತತ್ವ ಅಡಕವಾಗಿದೆ. ಜಗತ್ತಿನಲ್ಲಿ ಎಲ್ಲವೂ ಕಾಯಕ ನಿರತವಾಗಿವೆ. ಪ್ರಸಾದದ ಕ್ರಮವನ್ನು ಅನುಸರಿಸಿ ದಾಸೋಹ ಮಾಡುತ್ತಿವೆ. ನದಿಗಳು ಹರಿಯುವ ಕಾಯಕ ಮಾಡುತ್ತಿವೆ. ದಾಸೋಹ ಭಾವದಿಂದ ಸಮುದ್ರವನ್ನು ಸೇರುತ್ತಿವೆ. ಆ ಮೂಲಕ ಜನರ ನೀರಿನ ಸಮಸ್ಯೆ ಬಗೆಹರಿಸುತ್ತಿವೆ. ಅಲ್ಲದೆ ಭೂಭಾಗಕ್ಕಿಂತಲೂ ದೊಡ್ಡದಾದ ಸಮುದ್ರದ ನೀರು ಹೆಚ್ಚು ಉಪ್ಪಾಗದಂತೆ ನೋಡಿಕೊಳ್ಳುತ್ತ ದಾಸೋಹ ಭಾವದಿಂದ ಸಮುದ್ರ ಜೀವಿಗಳ ಜೀವ ಉಳಿಸುತ್ತಿವೆ. ರೈತರು ದಿನವಿಡೀ ದುಡಿದು ರಾತ್ರಿ ಮನೆಗೆ ಬಂದರೂ ಭೂಮಿಯಲ್ಲಿನ ಎರೆಹುಳುಗಳು ಕಾಯಕ ನಿರತವಾಗಿರುತ್ತವೆ. ಅವು ದಾಸೋಹ ಭಾವದಿಂದ ರೈತರ ಭೂಮಿಯನ್ನು ಹದಗೊಳಿಸುತ್ತಿರುತ್ತವೆ. ಮರಗಳು ನಿಂತಲ್ಲೇ ಕಾಯಕ ನಿರತವಾಗಿ ಜನರಿಗೆ ದಾಸೋಹ ಭಾವದಿಂದ ಫಲಗಳನ್ನು ಕೊಡುತ್ತಿರುತ್ತವೆ. ಜೇನು ನೊಣಗಳು ಹೂವಿನ ಮಕರಂದವನ್ನು ಹೀರುತ್ತವೆ. ಆದರೆ ದಾಸೋಹ ಭಾವದಿಂದ ಪರಾಗಸ್ಪರ್ಶದ ಕಾಯಕದ ಮೂಲಕ ಆ ಹೂವಿನ ಮರ ಮತ್ತು ಬಳ್ಳಿಗಳ ಸಂತತಿಯನ್ನು ಹೆಚ್ಚಿಸುತ್ತಿರುತ್ತವೆ. ಹೀಗೆ ಇಡೀ ಜಗತ್ತೇ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವದಿಂದ ಕೂಡಿದೆ.

ಕಾಯಕವೆಂಬುದು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತ, ಬದುಕನ್ನು ಹೆಚ್ಚು ಹೆಚ್ಚು ಸುಂದರಗೊಳಿಸುವ ಉತ್ಪಾದನಾ ಕ್ರಿಯೆ. ನಮ್ಮ ಉತ್ಪಾದನಾ ವ್ಯವಸ್ಥೆ ಜೀವಜಾಲ ಸಮತೋಲನಕ್ಕೆ ಧಕ್ಕೆ ಉಂಟುಮಾಡಬಾರದು. ನಮ್ಮ ನದಿ, ಸಮುದ್ರ, ಅರಣ್ಯ ಮತ್ತಿತರ ನೈಸರ್ಗಿಕ ಸಂಪನ್ಮೂಲಗಳು ವಿನಾಶದ ಅಂಚಿಗೆ ತಲುಪದ ಹಾಗೆ ಎಚ್ಚರಿಕೆ ವಹಿಸಿ ಉತ್ಪಾದನೆಯಲ್ಲಿ ತೊಡಗಬೇಕು. ಸತ್ಯ ಶುದ್ಧವಾದುದನ್ನೇ ಉತ್ಪಾದಿಸಬೇಕು. ಇದು ಕಾಯಕ ಪ್ರಜ್ಞೆ.

ಜಗತ್ತಿನ ಎಲ್ಲ ವಸ್ತುಗಳು ದೇವರ ಕಾಣಿಕೆ. ಇದಕ್ಕೆ ಪ್ರಸಾದ ಎಂದು ಕರೆಯುವರು ಪ್ರತಿಯೊಂದು ಕೂಡ ದೇವರ ಕಾಣಿಕೆಯೆ ಆಗಿದೆ. ಆದ್ದರಿಂದ ಎಲ್ಲ ಸಂಪನ್ಮೂಲಗಳನ್ನು ಪ್ರಸಾದ ರೂಪದಲ್ಲಿ ಬಳಸಬೇಕು. ಯಾವುದನ್ನೂ ಹಾಳು ಮಾಡಬಾರದು. ಒಂದು ಹನಿ ನೀರನ್ನೂ ಹಾಳು ಮಾಡಬಾರದು. ಒಂದು ತುತ್ತು ಅನ್ನವನ್ನೂ ಹಾಳುಮಾಡಬಾರದು. ಅವಶ್ಯಕತೆಗಿಂತ ಹೆಚ್ಚಿಗೆ ಯಾವುದನ್ನೂ ಬಳಸಬಾರದು. ಇದು ಪ್ರಸಾದ ಪ್ರಜ್ಞೆ.

ನಾವು ಉತ್ಪಾದಿಸುವುದು ಮತ್ತು ಗಳಿಸುವುದು. ಕೇವಲ ನಮಗಾಗಿ ಮತ್ತು ನಮ್ಮ ಕುಟುಂಬಕ್ಕಾಗಿ ಅಲ್ಲ. ಅದರಲ್ಲಿ ಸಮಾಜದ ಪಾಲೂ ಇದೆ. ಇಡಿ ಸಮಾಜವನ್ನೇ ದೇವರು ಎಂದು ಭಾವಿಸಿ. ನಾವು ಪಡೆದದ್ದರಲ್ಲಿನ ಹೆಚ್ಚಿನ ಪಾಲನ್ನು ದಾಸೋಹ ಭಾವದಲ್ಲಿ ಸಮಾಜಕ್ಕೆ ಅರ್ಪಿಸಬೇಕು. ಇಂಥ ಸಾಮಾಜಿಕ ಪ್ರಜ್ಞೆಯೊಂದಿಗೆ ಸಮಾಜ ರಕ್ಷಣೆ ಮಾಡಬೇಕು. ಯಾರೂ ನೋವಿಗೆ ಒಳಗಾಗದಂಥ ಮತ್ತು ಯಾರೂ ಹಸಿವಿನಿಂದ ಬಳಲದಂಥ ಸಮಾಜವನ್ನು ನಿರ್ಮಾಣ ಮಾಡಬೇಕು. ಇದು ದಾಸೋಹ ಪ್ರಜ್ಞೆ.

ಹೀಗೆ ಸಾಮಾಜಿಕ ಪ್ರಜ್ಞೆಯ ಬಸವಧರ್ಮದಲ್ಲಿ ವ್ಯಕ್ತಿಗತ ಮೋಕ್ಷ ಎಂಬುದು ಇಲ್ಲ. ಶೋಷಣೆ ಇಲ್ಲದ ಸುಸಂಸ್ಕೃತ ಸಮಾಜದ ನಿರ್ಮಾಣದಲ್ಲಿ ತೊಡಗುವ ಆನಂದವೇ ಮೋಕ್ಷದ ಆನಂದ. ಹೀಗೆ ಬಸವಧರ್ಮದಲ್ಲಿ ಮೋಕ್ಷ ಎಂಬುದು ಮಾನವನ ಜೀವಿತಾವಧಿಯಲ್ಲೇ ಲಭಿಸುವಂಥದ್ದು. ಇಲ್ಲಿ ಮೋಕ್ಷ ಎಂಬುದು ಅತ್ಯುನ್ನತ ಆನಂದದ ಮನಸ್ಥಿತಿ.

ಬಸವಧರ್ಮದ ಮೂಲ ತತ್ತ್ವಗಳಾದ ಕಾಯಕ, ಪ್ರಸಾದ ಮತ್ತು ದಾಸೋಹ ತತ್ವಗಳು ಸಾಮಾಜಿಕ ಅರ್ಥಶಾಸ್ತ್ರದ ತತ್ವಗಳಾಗಿವೆ. ಆದ್ದರಿಂದಲೇ ಕಾಯಕ ಪ್ರಜ್ಞೆ ಯೋಗ್ಯ ಉತ್ಪಾದನಾ ವ್ಯವಸ್ಥೆಯನ್ನು ರೂಪಿಸುವುದು. ಪ್ರಸಾದ ಪ್ರಜ್ಞೆ ಯೋಗ್ಯರೀತಿಯಲ್ಲಿ ವಸ್ತುಗಳನ್ನು ಉಪಯೋಗಿಸುವ ವ್ಯವಸ್ಥೆಯನ್ನು ರೂಪಿಸುವುದು. ದಾಸೋಹ ಪ್ರಜ್ಞೆ ಯೋಗ್ಯರೀತಿಯಲ್ಲಿ ವಸ್ತುಗಳ ವಿತರಣೆಯ ವ್ಯವಸ್ಥೆಯನ್ನು ರೂಪಿಸುವುದು.

ಇಂಥ ವ್ಯವಸ್ಥಿತ ಸಮಾಜದಲ್ಲಿ. ಯಾವುದೇ ರೀತಿಯ ಭೇದಭಾವಗಳು ಇರುವುದಿಲ್ಲ. ಕ್ರೌರ್ಯ ಇರುವುದಿಲ್ಲ. ಎಲ್ಲರೂ ಘನತೆಯಿಂದ ಮತ್ತು ಸೇವಾಭಾವದಿಂದ ಬದುಕುವರು. ಪ್ರತಿಯೊಬ್ಬರು ಚೆನ್ನಾಗಿ ಬದುಕುವಂಥ ವಾತಾವರಣ ಸೃಷ್ಟಿಸುವರು.

ಬಸವಣ್ಣನವರ ಕನಸು 21ನೇ ಶತಮಾನದಲ್ಲಿ ನನಸಾದರೆ. ಈ ಜಗತ್ತು ಎಲ್ಲರೀತಿಯ ಸಮಸ್ಯೆಗಳಿಂದ ಮುಕ್ತವಾಗಿ ಇಡೀ ಮಾನವಕುಲ ಒಂದಾಗುವುದು.



❑ ರಂಜಾನ್ ದರ್ಗಾ
ನಿರ್ದೇಶಕರು, ವಚನ ಅಧ್ಯಯನ ಕೇಂದ್ರ,
ಬಸವ ಸೇವಾ ಪ್ರತಿಷ್ಠಾನ, ಬೀದರ್

# ಯುಗದ ಕವಿ–ಜಗದ ಕವಿ–ಕುವೆಂಪು ಸಮಗ್ರ ನೋಟ

**ಕು**ವೆಂಪು ಈ ಶತಮಾನ ಕಂಡ ಕನ್ನಡ ಸಾಹಿತ್ಯದ ಶ್ರೇಷ್ಠ ಕವಿ, ಕಾದಂಬರಿಕಾರ, ದಾರ್ಶನಿಕ ಹಾಗೂ ಸಾಂಸ್ಕೃತಿಕ ಚಿಂತಕ. ಸನಾತನ ಚಿಂತನೆಗಳಿಗೆ ಆಧುನಿಕ, ವೈಚಾರಿಕ ಹಾಗೂ ವೈಜ್ಞಾನಿಕ ಆಯಾಮವನ್ನು ನೀಡಿದ ಮಹಾನ್ ಚೇತನ. ಈ ದೇಶದ ಪರಂಪರೆಗೆ ಅವರು ತೋರಿದ ಸೃಜನಾತ್ಮಕ ಪ್ರತಿಕ್ರಿಯೆಗಳು ಮತ್ತು ಜಾಗತಿಕ ಪ್ರಜ್ಞೆಯನ್ನು ಅವರು ಅರಗಿಸಿಕೊಂಡ ಕ್ರಮಗಳು ಹಾಗೂ ಯುಗ ಪರಿವರ್ತನೆಯ ಸೂಕ್ಷ್ಮಗಳಿಗೆ ಸ್ಪಂದಿಸುತ್ತ, ಅವುಗಳನ್ನು ಗುರುತಿಸಿ ತಮ್ಮ ಬರಹದ ಮೂಲಕ ಅದಕ್ಕೆ ಹೊಂದುವಂತೆ ಜನಮನವನ್ನು ಸಜ್ಜುಗೊಳಿಸಿದ ಪ್ರಯತ್ನಗಳು ಕುವೆಂಪು ಅವರನ್ನು ಕನ್ನಡ ಸಾಹಿತ್ಯದ ಉತ್ತುಂಗ ಶಿಖರಕ್ಕೇರಿಸಿದೆ. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ–ಕುಪ್ಪಳಿ, ಕನ್ನಡ ವಿಶ್ವವಿದ್ಯಾಲಯ–ಹಂಪಿ, ಕರ್ನಾಟಕ ಸಾಹಿತ್ಯ ಅಕಾಡೆಮಿ–ಬೆಂಗಳೂರು, ಕುವೆಂಪು ಭಾಷಾ ಭಾರತಿ–ಬೆಂಗಳೂರು, ಸಾಹಿತ್ಯ ಅಕಾಡೆಮಿ–ನವದೆಹಲಿ ಹಾಗೂ ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಏಪ್ರಿಲ್ 15, 16 ಮತ್ತು 17ರಂದು ರಾಷ್ಟ್ರದ ರಾಜಧಾನಿಯಲ್ಲಿ 'ಕುವೆಂಪು ಸಮಗ್ರ ನೋಟ'–ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಕುವೆಂಪು ಅವರ ಸಮಗ್ರ ಸಾಹಿತ್ಯದ ಅವಲೋಕನ ಹಾಗೂ ಮೂಲಮೌಲ್ಯಗಳನ್ನು ಪುನರ್ ವ್ಯಾಖ್ಯಾನಿಸುವ ಸಲುವಾಗಿ ವಿಚಾರಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು.



ದೆಹಲಿ ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರ ಸಂಕಿರಣ

## ದೆಹಲಿ ವಿಶ್ವವಿದ್ಯಾಲಯದಲ್ಲಿ ಕುವೆಂಪು ಕಂಪು

'ಕುವೆಂಪು ಸಮಗ್ರ ನೋಟ' ವಿಚಾರ ಸಂಕಿರಣದ ಭಾಗವಾಗಿ 15.04.2011ರಂದು ದೆಹಲಿ ವಿಶ್ವವಿದ್ಯಾಲಯದ 'ಆಧುನಿಕ ಭಾರತೀಯ ಭಾಷೆಗಳು ಮತ್ತು ಸಾಹಿತ್ಯ ವಿಭಾಗ'ದಲ್ಲಿ ಕುವೆಂಪು ಕುರಿತಾಗಿ ಚರ್ಚೆಯೊಂದನ್ನು ಏರ್ಪಡಿಸಲಾಗಿತ್ತು. ಕುವೆಂಪು ಅವರ ಬರವಣಿಗೆಯ ಪ್ರಸ್ತುತತೆಯನ್ನು ಅಂತಾರಾಷ್ಟ್ರೀಯ ಚೌಕಟ್ಟಿನಲ್ಲಿರಿಸಿ ವಿಶ್ಲೇಷಿಸುವ ಈ ಚರ್ಚೆಯಲ್ಲಿ ಖ್ಯಾತ ಕವಿ, ನಾಟಕಕಾರ, ಡಾ. ಎಚ್.ಎಸ್. ಶಿವಪ್ರಕಾಶ್, ವಿಮರ್ಶಕ ಪ್ರೊ. ಟಿ.ಎಸ್. ಸತ್ಯನಾಥ್, ದೆಹಲಿ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಕೆ.ಡಿ. ಪಾಲಿವಾಲ್ ಮತ್ತು ಮರಾಠಿ ವಿಮರ್ಶಕ ಪ್ರೊ. ಎನ್.ಡಿ. ಮಿರಾಜ್‌ಕರ್ ಅವರು ತಮ್ಮ ವಿಚಾರಗಳನ್ನು ವಿದ್ವತ್ಪೂರ್ಣವಾಗಿ ಮಂಡಿಸಿದರು.

ಚರ್ಚೆಯ ಆರಂಭದಲ್ಲಿ ವಿಚಾರ ಮಂಡನೆ ಮಾಡಿದವರು ಡಾ. ಎಚ್.ಎಸ್. ಶಿವಪ್ರಕಾಶ್ ಅವರು. ಕನ್ನಡದ ಸಂದರ್ಭದಲ್ಲಿ ವೈದಿಕ ಚಿಂತನಾಕ್ರಮವನ್ನು ತಿರಸ್ಕರಿಸಿ, ಶೂದ್ರ ಪ್ರಜ್ಞೆಯನ್ನು ಎತ್ತಿ ಹಿಡಿದ ಕುವೆಂಪು ಅವರು ಕೇವಲ ಬರಹಗಾರರಾಗಿ ಉಳಿಯದೆ, 20ನೇ ಶತಮಾನದ ಕನ್ನಡದ ಚಿಂತನಾಕ್ರಮವನ್ನು ಹೇಗೆ ಪ್ರಮುಖವಾಗಿ ರೂಪಿಸಿದರು ಎಂಬುದನ್ನು ಸೋದಾಹರಣವಾಗಿ ವಿಶ್ಲೇಷಿಸಿದರು. 'ಶೂದ್ರತಪಸ್ವಿ'ಯ 'ಶಂಭೂಕ', ಬೆರಳ್‌ಗೆ ಕೊರಳಿನ 'ಏಕಲವ್ಯ', 'ಜಲಗಾರ' ನಾಟಕಗಳು ಒಂದು ನಿರ್ದಿಷ್ಟ ತತ್ವವನ್ನು ಹೇಗೆ ಪ್ರಕಟಪಡಿಸುತ್ತವೆ ಎಂಬುದನ್ನು ವಿವರಿಸಿದ ಶಿವಪ್ರಕಾಶ್ ಅವರು "ಕುವೆಂಪು ಅವರ ತತ್ವಗಳು ವಿಶ್ವಮಾನವ ಪ್ರಜ್ಞೆಯನ್ನು ಎತ್ತಿ ಹಿಡಿಯುತ್ತವೆ, ಆದರೆ ಅವು ಇಂದಿನ ಜಾಗತೀಕರಣದ ಗೋಳುಗಳನ್ನು ಸಮರ್ಥಿಸುವಂತಹದ್ದಲ್ಲ" ಎಂದು ಹೇಳಿದರು.

'ರಾಮಾಯಣ ದರ್ಶನಂ' ಕೃತಿಯನ್ನು ಕೇಂದ್ರವಾಗಿರಿಸಿಕೊಂಡು ತಮ್ಮ ವಿಚಾರ ಮಂಡನೆ ಮಾಡಿದ ಪ್ರೊ. ಕೆ.ಬಿ. ಪಾಲಿವಾಲ್ ಅವರು 'ಕುವೆಂಪು ಅವರು ಉದಾತ್ತ ರಾಮನನ್ನು ಸೃಜಿಸುವಾಗ ಅದಕ್ಕೆ ಜೈನ ರಾಮಾಯಣದಿಂದ ಪ್ರೇರಣೆ ಪಡೆದಿದ್ದರು. ಹಾಗೆಯೇ 20ನೇ ಶತಮಾನದ ಮಹಾಮಾನವತಾವಾದದಿಂದಲ ೂ ಮಾರ್ಗದರ್ಶನ ಪಡೆದಿದ್ದರು. ರಾಮಕೃಷ್ಣ ಪರಮಹಂಸರ ಧೋರಣೆಯಿಂದ ಪ್ರಭಾವಿತರಾಗಿದ್ದ ಕುವೆಂಪು ಅವರು ಆಧುನಿಕ ಭಾರತದ ನಿರ್ಮಾತೃಗಳಲ್ಲಿ ಪ್ರಮುಖರು' ಎಂದು ವಿಶ್ಲೇಷಿಸಿದರು.

ಕುವೆಂಪು ಅವರ ಕಾವ್ಯದ ಕುರಿತು ಡಾ. ಟಿ.ಎಸ್. ಸತ್ಯನಾಥ್ ಸಿದ್ಧಪಡಿಸಿದ ಪ್ರಬಂಧವನ್ನು ಅವರ ವಿದ್ಯಾರ್ಥಿ ಸಾಕ್ಷಿ ಸೋನಿ ಅವರು ಮಂಡಿಸಿದರು. ಕುವೆಂಪು ಅವರ 'ಭಾರತ ಜನನಿಯ ತನುಜಾತೆ' ಕವನವನ್ನು ಪ್ರಧಾನವಾಗಿ ಆಧರಿಸಿ ತನ್ನ ವಿಚಾರಗಳನ್ನು ಮಂಡಿಸಿದ ಸತ್ಯನಾಥ್ ಅವರು 'ರಾಷ್ಟ್ರೀಯ ಹೋರಾಟದಲ್ಲಿ ಭಾರತವನ್ನು ತಾಯಿಯಾಗಿ ಕಲ್ಪಿಸಿದ ಕುವೆಂಪು ಅವರು ಕರ್ನಾಟಕವನ್ನು 'ಅವಳ ಮಗಳಾಗಿ' ಗ್ರಹಿಸಿ 'ನಾಡು ಮತ್ತು ದೇಶ'ಗಳ ನಡುವಣ ಸಂಘರ್ಷವನ್ನು ಹೇಗೆ ಪರಿಹರಿಸಿಕೊಂಡರು ಎಂಬುದನ್ನು ಮನೋಜ್ಞವಾಗಿ ವಿವರಿಸಿದರು. ಜೊತೆಗೆ ಕರ್ನಾಟಕದಲ್ಲಿ 1823ರಷ್ಟು ಹಿಂದೆಯೇ ಕಾಣಿಸಿಕೊಂಡ ಹಿಂದುಳಿದ ವರ್ಗಗಳ ಚಳುವಳಿಯು ಕುವೆಂಪು ಅವರ ಕಾವ್ಯವನ್ನು ಹೇಗೆ ಪ್ರಧಾನವಾಗಿ ಪ್ರಭಾವಿಸಿತು' ಎಂದು ವಿಶ್ಲೇಷಿಸಿದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಮರಾಠಿ ವಿದ್ವಾಂಸ ಡಾ. ಮಿರಾಜ್‌ಕರ್ ಅವರು ಕುವೆಂಪು ಅವರ ಬರಹಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಚೌಕಟ್ಟಿನಲ್ಲಿರಿಸಿ ನೋಡಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಾ 'ಕುವೆಂಪು ಅವರ ಪ್ರಖರ ವೈಚಾರಿಕತೆಯು ಇಂದಿನ ಅಗತ್ಯಗಳಲ್ಲೊಂದಾಗಿದೆ' ಎಂದು ಹೇಳಿದರು.



ಕಡಿದಾಳ್ ಪ್ರಕಾಶ್ ಅವರು ಕುವೆಂಪು ಅವರ ಭಾವಚಿತ್ರವನ್ನು ನೀಡುತ್ತಿರುವುದು

**ದೆಹಲಿ ವಿಶ್ವವಿದ್ಯಾಲಯಲ್ಲಿ ಕುವೆಂಪು ಭಾವಚಿತ್ರ :** ವಿಚಾರ ಸಂಕಿರಣದ ಸಂದರ್ಭದಲ್ಲಿ ಆಧುನಿಕ ಭಾರತೀಯ ಭಾಷೆಗಳು ಮತ್ತು ಸಾಹಿತ್ಯ ವಿಭಾಗದ ಮುಖ್ಯಸ್ಥ ಪ್ರೊ. ಮಾರಿಯಪ್ಪನ್ ಅವರಿಗೆ ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಶ್ರೀ ಕಡಿದಾಳ್ ಪ್ರಕಾಶ್ ಅವರು ಕುವೆಂಪು ಅವರ ಭಾವಚಿತ್ರವನ್ನು ನೀಡಿದರು. ಭಾವಚಿತ್ರವನ್ನು ಸ್ವೀಕರಿಸಿದ ಮಾರಿಯಪ್ಪನ್ ಅವರು 'ಆಧುನಿಕ ಭಾರತದ ನಿರ್ಮಾತೃಗಳಲ್ಲಿ ಒಬ್ಬರಾದ ಕುವೆಂಪು ಅವರ ಭಾವಚಿತ್ರವು ವಿಭಾಗದಲ್ಲಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ' ಎಂದರು.

ಈ ವಿಚಾರ ಸಂಕಿರಣದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರೊ. ಹಿ.ಚಿ. ಬೋರಲಿಂಗಯ್ಯ ಮತ್ತು ಡಾ. ಕರೀಗೌಡ ಬೀಚನಹಳ್ಳಿ ಹಾಗೂ ದೆಹಲಿ ಕರ್ನಾಟಕ ಸಂಘದ ಸಾಹಿತ್ಯ ಸಮಿತಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದರು. ಭಾರತದ ವಿವಿಧ ಭಾಷೆಗಳ ಸಮಾರು 50ಜನ ಸಂಶೋಧಕರು ಮತ್ತು ವಿದ್ಯಾರ್ಥಿಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಡಾ. ಸತ್ಯನಾಥ್ ಅವರು ವಿಶೇಷ ಆಸಕ್ತಿ ವಹಿಸಿ ಈ ವಿಚಾರ ಸಂಕಿರಣವನ್ನು ಆಯೋಜಿಸಿದ್ದರು.

# ಶತಮಾನ ಕಂಡ ದಾರ್ಶನಿಕ ರಸಋಷಿ ಕುವೆಂಪು




ಉದ್ಘಾಟನಾ ಸಮಾರಂಭ

**ಉದ್ಘಾಟನೆ :** "ಕನ್ನಡ ಸಾಹಿತ್ಯದ ಒಂದೂವರೆ ಸಾವಿರ ವರ್ಷಗಳ ಸುದೀರ್ಘ ಇತಿಸಾಹದಲ್ಲಿ ಕುವೆಂಪು ಅವರಿಗೆ ವಿಶಿಷ್ಟವಾದ ಸ್ಥಾನವಿರುವುದಕ್ಕೆ ಕಾರಣ ಅವರು ಕವಿಯಾಗಿ-ದಾರ್ಶನಿಕರಾಗಿ ಮಹತ್ತರವಾದುದನ್ನು ಸಾಧಿಸಿದುದಲ್ಲದೆ ತಮ್ಮ ಸೃಜನಶೀಲತೆಯನ್ನು ಸಾಮಾಜಿಕ ಪರಿವರ್ತನೆಗೂ ವಿನಿಯೋಗಿಸಿದ್ದು. ಇಂಥ ಮಹಾಪುರುಷರ ಸಾನಿಧ್ಯ ದೊರೆತದ್ದು ನನ್ನ ಪುಣ್ಯ" ಎಂದು "ಕುವೆಂಪು ಸಮಗ್ರ ನೋಟ"-ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏಪ್ರಿಲ್ 15ರಂದು ಸಂಜೆ ಉದ್ಘಾಟನೆ ಮಾಡಿದ ಡಾ. ಪ್ರಭುಶಂಕರ ಅವರು ಅಭಿಮಾನದಿಂದ ಹೇಳಿದರು. "ಹದಿಮೂರು ವರ್ಷಗಳ ಕಾಲ ರಾಮಕೃಷ್ಣಾಶ್ರಮದಲ್ಲಿ ಪರಮಹಂಸರ ಶಿಷ್ಯರಾಗಿ, ಅವರ ಉಪದೇಶಗಳನ್ನು, ಆಧ್ಯಾತ್ಮದ ಅನುಭವಗಳನ್ನು ಸ್ವೀಕರಿಸಿಕೊಂಡು ಕನ್ನಡಿಗರಿಗೆ ವಿಪುಲ ಸಾಹಿತ್ಯವನ್ನು ನೀಡಿದ ಕುವೆಂಪು ಜಗತ್ತಿನ ಅನೇಕ ಮಹಾಪುರುಷರ ಚರಿತ್ರೆಯಲ್ಲಿ ಮೇರು ಸ್ಥಾನದಲ್ಲಿ ನಿಲ್ಲುತ್ತಾರೆ" ಎಂದು ಅವರು ಹೇಳಿದರು.

"ನೇಗಿಲನ್ನು ಉಳುವ ರೈತನನ್ನು ಯೋಗಿಯನ್ನಾಗಿ ಮಾಡಿದ ಮತ್ತೊಬ್ಬ ಕವಿಯನ್ನು ನಾನೆಲ್ಲೂ ಕಂಡಿಲ್ಲ" ಎಂದು ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾದ, ಮಾನ್ಯ ಸಂಸತ್ ಸದಸ್ಯ, ಕುವೆಂಪು ಪ್ರತಿಷ್ಠಾನದ ಸ್ಥಾಪಕ ಸದಸ್ಯರೂ ಆದ ಶ್ರೀ ಡಿ.ಬಿ. ಚಂದ್ರೇಗೌಡರು ನುಡಿದರು. 'ಮನುಜ ಮತ, ವಿಶ್ವ ಪಥ' ಎಂದು ಸಾರಿದ ವಿಶ್ವಮಾನವ ಕುವೆಂಪು ಅವರು ಕನ್ನಡಿಗರಷ್ಟೇ ಅಲ್ಲ ರಾಷ್ಟ್ರೀಯ ಜನನಾಯಕರು ಕೂಡಾ ಹೌದು. ಅವರನ್ನು ಜನ ಸಾಮಾನ್ಯರು ಕೂಡ ಗುರುತಿಸಿದ್ದಾರೆ. ಸಮನ್ವಯವನ್ನು ಸಾಧಿಸಿದ ಮಹಾನ್ ಕವಿ ಜನಮಾನಸದಲ್ಲಿ ಆಳವಾಗಿ ಬೇರೂರಿದ್ದಾರೆ. ವಾರಣಾಸಿಯಲ್ಲಿ ತುಳಸಿ ರಾಮಾಯಣ ದರ್ಶನ ಭವನ ಇರುವಂತೆ ಕರ್ನಾಟಕದಲ್ಲೂ ಶ್ರೀ ರಾಮಾಯಣ ದರ್ಶನ ಭವನ ಮಾಡಬೇಕಾಗಿದೆ ಎಂಬ ವಿಚಾರವನ್ನು ವ್ಯಕ್ತಪಡಿಸುತ್ತಾ ಶ್ರೀ ಡಿ.ಬಿ. ಚಂದ್ರೇಗೌಡರು ಕುವೆಂಪು ಪ್ರತಿಷ್ಠಾನ, ಭಾಷಾಭಾರತಿ ನಡೆದು ಬಂದ ಹಾದಿ, ಸ್ಥಾಪನೆ,




ರವಿ ಮರೂರ್ ಮತ್ತು ತಂಡದವರ ಕುವೆಂಪು ಗೀತಗಾಯನ

ಧ್ಯೇಯೋದ್ದೇಶಗಳ ಕುರಿತು ವಿವರಿಸಿದರು.

ರವಿಮರೂರ್ ಅವರು "ಭಾರತ ಜನನಿಯ ತನುಜಾತೆ"-ನಾಡಗೀತೆಯನ್ನು ಹಾಗೂ ಖ್ಯಾತ ಸುಗಮ ಸಂಗೀತ ಕಲಾವಿದೆ ಶ್ರೀಮತಿ ರತ್ನಮಾಲಾ ಪ್ರಕಾಶ್ ಮತ್ತು ಸಂಗೀತ ನಿರ್ದೇಶಕ ಎನ್.ಎಸ್. ಪ್ರಸಾದ್ ಅವರು ದೆಹಲಿ ಕಲಾವಿದರೊಡಗೂಡಿ "ಓ ನನ್ನ ಚೇತನ" ಗೀತೆಯನ್ನು ಸುಮಧುರವಾಗಿ ಹಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಉದ್ಘಾಟನಾ ಸಮಾರಂಭದ ವಿದ್ವಾಂಸರನ್ನು ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಸ್ವಾಗತಿಸಿದರು. ಕುವೆಂಪು ಅಧ್ಯಯನ ಕೇಂದ್ರದ ಮುಖ್ಯಸ್ಥರಾದ ಡಾ. ಹಿ.ಚಿ. ಬೋರಲಿಂಗಯ್ಯ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಹಂಪಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎ. ಮುರಿಗೆಪ್ಪ ಅವರು "ವಿಭಿನ್ನವಾದ ದೇವರ ಕಲ್ಪನೆಯನ್ನು ಹೊಂದಿದ್ದ ಕುವೆಂಪು ಅವರು ನೂರಾರು ದೇವರನ್ನು ದೂರ ನೂಕಿ, ಜನಮಾನಸದಲ್ಲಿದ್ದ ಜಡತ್ವವನ್ನು ತೊಲಗಿಸಿ ವಿಶ್ವಮಾನವ ಪ್ರಜ್ಞೆಯ ಪರಿಕಲ್ಪನೆಯನ್ನು ಸಾರಿದ ಮಹಾನ್ ಕವಿ. ಕುವೆಂಪು ಅವರನ್ನು ನಿಜವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ನಿಸರ್ಗವನ್ನು ಅರ್ಥ ಮಾಡಿಕೊಳ್ಳಬೇಕು" ಎಂದು ನಿಸರ್ಗ ಕವಿಯ ಬಗ್ಗೆ ಮಾತನಾಡಿದರು.

ಕುವೆಂಪು ಕಂಪನ್ನು ದೆಹಲಿಗೆ ತಂದ ಕುವೆಂಪು ಪ್ರತಿಷ್ಠಾನಕ್ಕೆ ಅಭಿನಂದನೆ ಸಲ್ಲಿಸುತ್ತಾ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ತಮ್ಮ ವಿದ್ಯಾರ್ಥಿ ಜೀವನದ ದಿನಗಳಲ್ಲಿ ರಾಮಕೃಷ್ಣಾಶ್ರಮದಲ್ಲಿ ಕುವೆಂಪು ಅವರನ್ನು ಪ್ರತ್ಯಕ್ಷವಾಗಿ ಕಂಡಿದ್ದನ್ನು ಸ್ಮರಿಸಿದರು. ಶ್ರೀಮಂತ, ಸಮೃದ್ಧ, ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಕನ್ನಡೇತರರಿಗೆ ಪರಿಚಯಿಸುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸುವ ತುರ್ತು ಅವಶ್ಯಕತೆ ಇದೆ, ಅದಕ್ಕಾಗಿ ಸಂಘದ ಸಹಕಾರ ಎಂದೆಂದೂ ಇದೆ ಎಂಬುದಾಗಿ ತಿಳಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಡಾ. ಹಂಪನಾ ಅವರು ಕನ್ನಡ ಸಾಹಿತ್ಯಕ್ಕೆ ತೇಜಸ್ಸನ್ನು ಮಾತ್ರವಲ್ಲದೇ ತೇಜಸ್ವಿಯನ್ನೂ ಕೊಟ್ಟ ನಿಸರ್ಗದ ಕವಿ ಕುವೆಂಪು ಅವರು ಎಂದು ಬಣ್ಣಿಸಿದರು. ಕೋಟಿ ಕೋಟಿ ಮನಸ್ಸುಗಳನ್ನು ಆವರಿಸಿಕೊಂಡ ಕುವೆಂಪು ಅವರು ಹೊಸಗನ್ನಡಕ್ಕೆ ಹೊಸ ಆಯಾಮವನ್ನು ನೀಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿ ಸಾಹಿತ್ಯ ಶಿಖರಪ್ರಾಯರಾದರು ಎಂದು ನುಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ, ಕುವೆಂಪು ಭಾಷಾ ಭಾರತಿಯ ಅಧ್ಯಕ್ಷ ಪ್ರೊ. ಪ್ರಧಾನ ಗುರುದತ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಬೈಕೆರೆ ನಾಗೇಶ್ ಅವರು ಕುವೆಂಪು ಅವರ ಭಾವಚಿತ್ರ ಹಾಗೂ ಕುವೆಂಪು ಕೃತಿಗಳ ಪ್ರದರ್ಶನವನ್ನು ಉದ್ಘಾಟಿಸುತ್ತಿರುವುದು

ಸಂಘದ ಆರ್ಟ್‌ಗ್ಯಾಲರಿಯಲ್ಲಿ ಮೂರು ದಿನಗಳ ಕಾಲ ಆಯೋಜಿಸಲಾಗಿದ್ದ ಕುವೆಂಪು ಅವರ ಅಪರೂಪದ ಕಪ್ಪು ಬಿಳುಪು ಭಾವಚಿತ್ರ ಪ್ರದರ್ಶನ ಹಾಗೂ ಕುವೆಂಪು ಕೃತಿಗಳ ಪ್ರದರ್ಶನ ಮತ್ತು ಮಾರಾಟದ ಉದ್ಘಾಟನೆಯನ್ನು ದೆಹಲಿಯ ಕರ್ನಾಟಕ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಅವರು ಉದ್ಘಾಟಿಸಿ ಕಾರ್ಯಕ್ರಮಕ್ಕೆ ಶುಭಕೋರಿದರು. ಈ ಪ್ರದರ್ಶನವನ್ನು ಬೆಂಗಳೂರಿನ ನರಸಿಂಹಮೂರ್ತಿಯವರು ವಿಶೇಷ ಮುತುವರ್ಜಿಯಿಂದ ಆಯೋಜಿಸಿದ್ದರು.

ಇದೇ ಸಂದರ್ಭದಲ್ಲಿ ಬರ್ಲಿನ್‌ನ ಟ್ಯಾಗೋರ್ ಸೆಂಟರ್‌ನ ನಿರ್ದೇಶಕರಾಗಿ ನೇಮಕಗೊಂಡ ಖ್ಯಾತ ಕವಿ, ನಾಟಕಕಾರ ಡಾ. ಎಚ್.ಎಸ್. ಶಿವಪ್ರಕಾಶ್ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಲಾಯಿತು.

ಡಾ. ಪುರುಷೋತ್ತಮ ಬಿಳಿಮಲೆ ವಿದ್ವಾಂಸರನ್ನು ಪರಿಚಯಿಸುತ್ತಾ ಕಾರ್ಯಕ್ರಮವನ್ನು ನಿರ್ವಹಿಸಿದರು. ನಂತರ ಕುವೆಂಪು ಕುರಿತಾದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಬೆಂಗಳೂರಿನಿಂದ ಆಗಮಿಸಿದ್ದ ರವಿ ಮರೂರ್ ಮತ್ತು ತಂಡದವರು ಸುಶ್ರಾವ್ಯವಾದ ಕುವೆಂಪು ಗೀತೆ ಗಾಯನದ ರಸದೌತಣ ನೀಡಿದರು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆ ಹೇಮಲತ ಗುಡ್ಡೇಗೌಡ ಅವರು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರೂಪಿಸಿದರು.

**ಈ ಶತಮಾನ ಕಂಡ ಕನ್ನಡ ಪರಂಪರೆಯ ಉತ್ತುಂಗದ ಕವಿ, ಮಾನವೀಯ ಮೌಲ್ಯಗಳ ಮೇರು ಶಿಖರ, ಕನ್ನಡ ನಾಡಿಗೆ, ಕನ್ನಡ ಸಾಹಿತ್ಯಕ್ಕೆ ಅಪಾರವಾದ ಕೀರ್ತಿಯನ್ನು, ಅತ್ಯಮೂಲ್ಯ ಗೌರವವನ್ನು ತಂದು ಕೊಟ್ಟ ರಾಷ್ಟ್ರಕವಿ ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು ಕಾವ್ಯ, ಕಾದಂಬರಿ ಮತ್ತು ನಾಟಕ ಹೀಗೆ ಮೂರು ಘಟ್ಟಗಳಲ್ಲಿ ವಿಶ್ಲೇಷಿಸಲಾಯಿತು.**

## ಸಹ್ಯಾದ್ರಿ ಶೃಂಗದಿಂದಿಳಿದು ಬಂದ ಕಾವ್ಯ ಗಂಗೆ–ಕುವೆಂಪು

ಏಪ್ರಿಲ್ 16, ಶನಿವಾರದಂದು ಕುವೆಂಪು ಸಮಗ್ರ ನೋಟ–ರಾಷ್ಟ್ರೀಯ ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಕುವೆಂಪು ಕಾವ್ಯ ಕುರಿತು ಚರ್ಚೆಯಾಯಿತು. ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಸಿದ್ಧ ಲೇಖಕಿ ಶ್ರೀಮತಿ ಕಮಲಾ ಹಂಪನಾ ವಹಿಸಿದ್ದರು. ಕುವೆಂಪು ಕಾವ್ಯದ ಕುರಿತು ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಟಿ.ಎಸ್.ಸತ್ಯನಾಥ್ ಮತ್ತು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಕುರಿತು ಮೈಸೂರಿನ ವಿದ್ಯಾವರ್ಧಕ ಕಾಲೇಜಿನ ಪ್ರಾಂಶುಪಾಲ, ಡಾ. ಶಿವರಾಮ ಕಾಡನಕುಪ್ಪೆ ಅವರು ವಿಚಾರ ಮಂಡಿಸಿದರು.



**ಕುವೆಂಪು ಕಾವ್ಯ :** ದೆಹಲಿ ವಿಶ್ವವಿದ್ಯಾಲಯದ ಆಧುನಿಕ ಭಾರತೀಯ ಭಾಷೆ ಮತ್ತು ಸಾಹಿತ್ಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಟಿ.ಎಸ್. ಸತ್ಯನಾಥ್ ಅವರು 'ಕುವೆಂಪು ಕಾವ್ಯ' ಕುರಿತು ಪ್ರಬಂಧ ಮಂಡಿಸಿದರು. ಕುವೆಂಪು ಅವರ ಕಾವ್ಯವನ್ನು ಅವರ ಸಮಕಾಲೀನರು ರಚಿಸಿದ ಕಾಲಘಟ್ಟದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರು. "ವಿಶ್ವಮಾನವತೆ ಪರಿಕಲ್ಪನೆ, ರಾಷ್ಟ್ರ ಮತ್ತು ನಾಡು ಪರಿಕಲ್ಪನೆ ಹಾಗೂ ಅಂತರ್‌ಚಲನೆಯ ಪರಿಕಲ್ಪನೆಯನ್ನು ಪ್ರಧಾನವಾಗಿ ಕುವೆಂಪು ಅವರ ಕಾವ್ಯಗಳಲ್ಲಿ ಗುರುತಿಸಬಹುದಾಗಿದೆ. 'ಓ ನನ್ನ ಚೇತನ, ಆಗು ನೀ ಅನಿಕೇತನ' ಕವನದಲ್ಲಿ ರಾಷ್ಟ್ರೀಯ ಪರಿಕಲ್ಪನೆಯನ್ನು ಕಟ್ಟುವ ರೀತಿ ಅದ್ಭುತ ಹಾಗೂ ಅಭೂತಪೂರ್ವ. ಮನುಜಮತ, ವಿಶ್ವಪಥ, ಸಮನ್ವಯತೆ ಹಾಗೂ ಸಮಾನತೆಯ ತತ್ವಗಳನ್ನು 'ಅನಿಕೇತನ'ದ ಮೂಲಕ ಪ್ರತಿಪಾದಿಸಿರುವ ಬಗೆ ನಿಜಕ್ಕೂ ವಿಶಿಷ್ಟ. ವೈಚಾರಿಕ ಚೌಕಟ್ಟನ್ನು ಒಡೆದು ಹೊಸ ತಾತ್ವಿಕ ಚೌಕಟ್ಟನ್ನು ನಿರ್ಮಿಸುವ ಪರಿ ಕುವೆಂಪು ಅವರನ್ನು ವಿಶ್ವಮಾನವನನ್ನಾಗಿ ರೂಪಿಸಿದೆ" ಎಂದರು. ಜೊತೆಗೆ ಮಿಲ್ಲರ್ ಆಯೋಗದಿಂದ ಆರಂಭವಾದ ಹಿಂದುಳಿದ ವರ್ಗಗಳ ಚಳುವಳಿಯು ಕುವೆಂಪು ಅವರ ಕಾವ್ಯಕ್ಕೆ ನೀಡಿರಬಹುದಾದ ಪ್ರೇರಣೆಯನ್ನು ಅವರು ವಿವರಿಸಿದರು.



**ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ :** ಮೈಸೂರಿನ ವಿದ್ಯಾವರ್ಧಕ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಿವರಾಮ ಕಾಡನಕುಪ್ಪೆ ಅವರು ತಮ್ಮ ವಿಚಾರ ಮಂಡಿಸುತ್ತ, ಕುವೆಂಪು ವಿರಚಿತ ರಾಮಾಯಣ ದರ್ಶನಂ ಒಂದು ವಿಶಿಷ್ಟ, ವಿಭಿನ್ನ ಮೇರು ಕೃತಿ ಎಂದರು. "ಇದು ಕೇವಲ ರಾಮ ಸೀತೆಯರ ಭಕ್ತಿ ಪ್ರಧಾನ ಕಥೆಯಲ್ಲ, ಅನೇಕ ಪಾಮರ, ನಿಕೃಷ್ಟ ಜೀವಿಗಳ ವಾಸ್ತವ ಕಥೆ. ಪುರಾಣದ ರಾಮ ಇಲ್ಲಿ ಭಿನ್ನವಾಗಿ ಸಮಚಿತ್ತನಾದ ಮಾನವನಂತೆ, ಕವಿಯಾಗಿ ಗೋಚರಿಸುತ್ತಾನೆ. ಇಡೀ ಕಾವ್ಯದುದ್ದಕ್ಕೂ ಸಾಮಾನ್ಯತೆಯೇ ಸಮಾನತೆಯೆಂಬ ತತ್ವ, ವರ್ಗ ಸಂಘರ್ಷ, ವರ್ಣ ಸಂಘರ್ಷ, ಆರ್ಯ–ದ್ರಾವಿಡ ಸಂಘರ್ಷವನ್ನು ಕಾಣುತ್ತೇವೆ. ರಾವಣತ್ವ ನಾಶವಾಗಿ ರಾಮತ್ವವಾಗಿ ಪರಿವರ್ತನೆಯಾಗುವ ಚಿತ್ರಣವನ್ನು ವಿಭಿನ್ನವಾದ ಹೊಸ ನೆಲೆಗಳಲ್ಲಿ ಕಾಣಬಹುದಾಗಿದೆ. ವಾಸ್ತವವಾದಿ ನೆಲೆಯಲ್ಲಿ ಬದುಕನ್ನು ಶೋಧಿಸುವ ರೀತಿ ಅನನ್ಯವಾಗಿದೆ. ಕುವೆಂಪು ತಮ್ಮ ದಾರ್ಶನಿಕ ಒಳನೋಟಗಳಿಂದ ಪುರಾಣದ ಮೂಲಕಾವ್ಯವನ್ನು ಹೊಸ ಕಾಲದ ಹೊಸ ಮೌಲ್ಯಗಳ ಬೆಳಕಿನಲ್ಲಿ ತೆರೆದು ತೋರಿದುದರಿಂದಲೇ ರಾಮಾಯಣ ದರ್ಶನಂ–ದರ್ಶನ ಕಾವ್ಯವಾಗಿ ಅರಳಲು ಸಾಧ್ಯವಾಯಿತು"–ಎಂಬ ಮಹತ್ವಪೂರ್ಣ ವಿಚಾರಗಳನ್ನು ಶಿವರಾಮ ಕಾಡನ ಕುಪ್ಪೆ ಅವರು ವಿದ್ವತ್ಪೂರ್ಣವಾಗಿ ಮಂಡಿಸಿದರು.



ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಲೇಖಕಿ ಶ್ರೀಮತಿ ಕಮಲಾ ಹಂಪನಾ ಅವರು ಕುವೆಂಪು ಅವರನ್ನು ಹತ್ತಿರದಿಂದ ಬಲ್ಲವರು. ಅನೇಕ ಸಾಹಿತಿಗಳ ಬದುಕು ಹಾಗೂ ಬರಹ ಬೇರೆ ಬೇರೆ. ಆದರೆ ಸಾಹಿತ್ಯ ಮತ್ತು ಬದುಕು ಒಂದೇ ಎಂಬ ತತ್ವಕ್ಕೆ ಬದ್ಧರಾಗಿ ಬದುಕಿದವರು ಕುವೆಂಪು ಎಂದು ಅನೇಕ ಸಂಗತಿಗಳನ್ನು ವಿವರಿಸುತ್ತ ಕುವೆಂಪು ಯಾವತ್ತೂ ಎಚ್ಚರ, ವಿವೇಕಪ್ರಜ್ಞೆಯನ್ನು ಕಳೆದುಕೊಳ್ಳಲಿಲ್ಲವೆಂಬ ಮಾತನ್ನು ಅಪ್ಯಾಯತೆಯಿಂದ ನುಡಿದರು. "ವಿಶ್ವದ ಶ್ರೇಷ್ಠ ಸಾಹಿತ್ಯದ ಸಾರವನ್ನೆಲ್ಲಾ ಹೀರಿಕೊಂಡು ಕನ್ನಡವನ್ನು ಸಮೃದ್ಧವಾಗಿಸಿದ ಕವಿಯ ಸಾಹಿತ್ಯದ ಮಿತಿಯನ್ನು ಸೀಮಿತಗೊಳಿಸಲಿಕ್ಕಾಗುವುದಿಲ್ಲ. ಅವರ ಕಾವ್ಯದಲ್ಲಿ ಜಗತ್ತಿದೆ, ಜಗತ್ತಿನಲ್ಲಿ ಕನ್ನಡವಿದೆ" ಎಂದರು. 20ನೇ ಶತಮಾನದಲ್ಲಿ ಚಿಂತನಾಕ್ರಮವನ್ನು ಬದಲಾಯಿಸಿ ಶೂದ್ರ ಪ್ರಜ್ಞೆಯನ್ನು ಬಡಿದೆಬ್ಬಿಸಿದ ಮೊದಲ ಕವಿ ಕುವೆಂಪು. ಸ್ತ್ರೀ ಪಾತ್ರಗಳನ್ನು ಉದಾತ್ತವಾಗಿ ಚಿತ್ರಿಸುವ ಮೂಲಕ ಗೌರವವನ್ನು ಮೆರೆದಿದ್ದಾರೆ. ತಮ್ಮ ನಾಡನ್ನು ಪ್ರೀತಿಸುವವರೇ ದೇಶವನ್ನು ಪ್ರೀತಿಸಬಲ್ಲರು ಎಂಬುದನ್ನು ತಮ್ಮ ಬರಹಗಳ ಮೂಲಕ, ವಿಚಾರಗಳ ಮೂಲಕ ವಿಶ್ವಮಾನವ ಪ್ರಜ್ಞೆಯನ್ನು ಸಾಧ್ಯವಾಗಿಸಿದ ಯುಗದ ಕವಿಗೆ ಕೇಂದ್ರ ಸರ್ಕಾರವು ಇತರ ರಾಷ್ಟ್ರೀಯ ಪುರಸ್ಕಾರಗಳಂತೆ 'ಕುವೆಂಪು ಪುರಸ್ಕಾರ' ಕೊಡುವಂತೆ ಮಾಡಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಗೋಷ್ಠಿಯ ನಡು ನಡುವೆ ರವಿ ಮುರೂರ್ ಮತ್ತವರ ತಂಡ ಹಾಗೂ ರತ್ನಮಾಲಾ ಪ್ರಕಾಶ್, ಸಂಗೀತ ನಿರ್ದೇಶಕ ಎನ್.ಎಸ್. ಪ್ರಸಾದ್ ಮತ್ತು ದೆಹಲಿ ಕಲಾವಿದರು ರಸಋಷಿ ಕುವೆಂಪು ಗೀತೆಗಳ ರಸದೌತಣವನ್ನು ನೀಡಿ ಕಾವ್ಯಮಯ ವಿಚಾರ ಸಂಕಿರಣವನ್ನು ನಾದಮಯಗೊಳಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಗೋಷ್ಠಿಯನ್ನು ನಿರ್ವಹಿಸಿದರು.

## ಕಾಲಪ್ರವಾಹದ ಮೂಕ ಸಾಕ್ಷಿಗಳು–ಕಾದಂಬರಿಗಳು

ಭೋಜನ ವಿರಾಮದ ನಂತರದ ಎರಡನೇ ಗೋಷ್ಠಿಗೆ ಖ್ಯಾತ ಗಾಯಕಿ ರತ್ನಮಾಲಾ ಪ್ರಕಾಶ್, ಎನ್.ಎಸ್. ಪ್ರಸಾದ್ ಮತ್ತು ದೆಹಲಿ ಕಲಾವಿದರು ಸುಮಧುರ ಕುವೆಂಪು ಗಾಯನದ ಮೂಲಕ ಚಾಲನೆ ನೀಡಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಹಿರಿಯ ಲೇಖಕ ಹಾಗೂ ಕುವೆಂಪು ಅವರ ಆಪ್ತ ಒಡನಾಡಿ ಪ್ರೊ. ಪ್ರಭುಶಂಕರ ವಹಿಸಿದ್ದರು. ಕಾನೂರು ಹೆಗ್ಗಡತಿ ಬಗ್ಗೆ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಡಿ.ಎ, ಬೆಂಗಳೂರಿನ ಡಾ.ಕೆ. ಪುಟ್ಟಸ್ವಾಮಿ ಮತ್ತು 'ಮಲೆಗಳಲ್ಲಿ ಮದುಮಗಳು' ಕುರಿತು ಹಾನಗಲ್ ಸರ್ಕಾರಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಚಂದ್ರಶೇಖರ ನಂಗಲಿ ಅವರು ತಮ್ಮ ವಿಚಾರಗಳನ್ನು ಮಂಡಿಸಿದರು.



**ಕಾನೂರು ಹೆಗ್ಗಡತಿ :** "ಕಾನೂರು ಹೆಗ್ಗಡತಿ ಸೃಷ್ಟಿಯಾದ ಕಾಲಘಟ್ಟವೆಂದರೆ ಫ್ರಾನ್ಸ್ ಮತ್ತು ಐರೋಪ್ಯ ದೇಶಗಳಲ್ಲಾಗುತ್ತಿದ್ದ ಕೈಗಾರಿಕಾ ಕ್ರಾಂತಿಯ ಕಾಲ. ಕೈಗಾರಿಕಾ ಕ್ರಾಂತಿಯಿಂದ ಮುದ್ರಣ ಮಾಧ್ಯಮ ಕಂಡುಕೊಂಡ ಕ್ರಾಂತಿ ಕೂಡ. ಕನ್ನಡ ಚರಿತ್ರೆಯಲ್ಲಿ ಕಾನೂರು ಹೆಗ್ಗಡತಿಗೆ ಹಲವಾರು ವೈಶಿಷ್ಟ್ಯಗಳಿವೆ. ಕಥನ ಕ್ರಮವೂ ಅಪರೂಪದ್ದು. ಸುಧಾರಣೆಯ ಹಂಬಲ, ಗದ್ಯದ ಭಾಷೆ, ಅರಣ್ಯ ವರ್ಣನೆ, ಪಾತ್ರ ಬಾಹುಳ್ಯ, ಆಧುನಿಕ ಪ್ರವೇಶದ ಅನರ್ಥಗಳು, ವಾಸ್ತವದ ನೆಲೆಯಲ್ಲಿರುವ ಎಲ್ಲಾ ನಿಷ್ಠುರ ವಾಸ್ತವದ ನೆಲೆಗಳನ್ನು ಕಟ್ಟಿಕೊಡುವ ಮೊಟ್ಟ ಮೊದಲ ಕಾದಂಬರಿಯಾಗಿ ಆ ಕಾಲದ ಎಲ್ಲಾ ಕಾದಂಬರಿಗಳಿಗಿಂತ ಕಾನೂರು ಹೆಗ್ಗಡತಿ ವಿಶಿಷ್ಟ ಹಾಗೂ ವಿಭಿನ್ನ" ಎಂದ ಡಾ.ಕೆ. ಪುಟ್ಟಸ್ವಾಮಿ ಈ ಕಾದಂಬರಿಯನ್ನು ಆಂಶಿಕ ದೃಷ್ಟಿಕೋನದಿಂದ ನೋಡದೇ ಪರಿಪೂರ್ಣ ದೃಷ್ಟಿಕೋನದಿಂದ ನೋಡಿದಾಗಲೇ ಕನ್ನಡದ ಪ್ರಜ್ಞೆಗೆ ಮತ್ತು ಓದಿಗೆ ಹರವು ದೊರೆಯುತ್ತದೆ ಎಂಬ ಮಾತನ್ನು ಹೇಳಿದರು.



**ಮಲೆಗಳಲ್ಲಿ ಮದುಮಗಳು :** "ಕಾದಂಬರಿಯ ಕ್ರಿಯೆ, ಕಾಲದೇಶಗಳ ವಸ್ತು, ವಿನ್ಯಾಸಕ್ರಮ ಸಜೀವ ನಿರೂಪಣೆಯಾಗಿದೆ. ಕುವೆಂಪು ಅವರ ಕಾದಂಬರಿಗಳು ಒಂದು ನಿರ್ದಿಷ್ಟ ವೈಧಾನಿಕತೆಯ ವಿರೋಧವಾಗಿ (anti-methodology) ಇತರ ಕಾದಂಬರಿಗಳಿಗಿಂತ ಭಿನ್ನವಾಗಿ ಮಾತ್ರವಲ್ಲದೇ ಒಂದು ಹೊಸಹಾದಿಯನ್ನು ಕನ್ನಡಿಗರಿಗೆ ತೋರಿಸುತ್ತದೆ. ಕಾಲಪ್ರವಾಹದ ಮೂಕ ಸಾಕ್ಷಿಗಳಂತೆ ಕುವೆಂಪು ಅವರ ಎರಡೂ ಕಾದಂಬರಿಗಳು ಕನ್ನಡ ಸಾರಸ್ವತ ಲೋಕದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತವೆ. ಮಲೆನಾಡಿನ ವೈವಿಧ್ಯಮಯ ಸ್ತ್ರೀಲೋಕವನ್ನು ಸೃಷ್ಟಿಸಿರುವ ಕುವೆಂಪು ಸಮೃದ್ಧವಾದ ಜೀವಂತ ಜಾನಪದ ಲೋಕವನ್ನು ಕಾದಂಬರಿಗಳಲ್ಲಿ ತೆರೆದಿಟ್ಟಿದ್ದಾರೆ. ಮುಂಚೂಣಿಯಲ್ಲಿದ್ದೂ ಮುಂಚೂಣಿಯಿಂದ ಪಾರಾದ ಕುವೆಂಪು ಪಂಪ, ಕುಮಾರವ್ಯಾಸ, ಅಲ್ಲಮರಂತೆ ಸಾಹಿತ್ಯಲೋಕದಲ್ಲಿ

"ಶಾಶ್ವತವಾಗಿ ನೆಲೆಯೂರಿದ್ದಾರೆ" ಎಂದು ಪ್ರೊ. ಚಂದ್ರಶೇಖರ ನಂಗಲಿ ಕಾದಂಬರಿಯನ್ನು ಸವಿಸ್ತಾರವಾಗಿ ವಿಶ್ಲೇಷಿಸಿದರು.

ಇನ್ನೂ ಅನೇಕ ತಲೆಮಾರುಗಳು ಓದಿ ಆಶ್ಚರ್ಯ ಚಕಿತರಾಗುವ ವಿಭೂತಿ ಪುರುಷ, ಕವಿಶೈಲದ ಋಷಿ ಕುವೆಂಪು ಅವರನ್ನು ಅನನ್ಯವಾಗಿ ಸ್ಮರಿಸಿದ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಲೇಖಕ ಪ್ರೊ. ಪ್ರಭುಶಂಕರ ಅವರು "ಹತ್ತನೇ ಶತಮಾನದ ಪಂಪ ಮತ್ತು ಇಪ್ಪತ್ತನೇ ಶತಮಾನದ ಕುವೆಂಪು ಕನ್ನಡ ಪರಂಪರೆಯ ಎರಡು ಶೃಂಗಗಳು. ಕನ್ನಡ ಸಾಹಿತ್ಯಕ್ಕೆ ಎತ್ತರವನ್ನು, ಒಂದು ದೊಡ್ಡ ಸಮುದಾಯಕ್ಕೆ ಘನತೆಯನ್ನು ತಂದುಕೊಟ್ಟ ಸಮಕಾಲೀನ ಕವಿ ಕುವೆಂಪು ಅವರ ಹಲವು ಸಂಪುಟಗಳ ರಚನೆಯಾಗಬೇಕಾಗಿದೆ" ಎಂದರು.



ಸಂಘದ ಸಹಕಾರ್ಯದರ್ಶಿ ರೇಣುಕಾ ನಿಡಗುಂದಿ ಗೋಷ್ಠಿಯನ್ನು ನಿರ್ವಹಿಸಿದರು.

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾತೀರ, ಬೆಂಗಳೂರಿನ ಗುರು ಉದಯ್ ಕುಮಾರ್ ಶೆಟ್ಟಿ ಮತ್ತು ತಂಡದವರು ಕುವೆಂಪು ಅವರ ಹಲವು ಪ್ರಸಿದ್ಧ ಗೀತೆಗಳನ್ನು ನೃತ್ಯರೂಪಕದಲ್ಲಿ ಅಭಿನಯಿಸಿ ರಂಜಿಸಿದರು. ಕನ್ನಡದ ಲೇಖಕ ಹಾಗೂ ಅನ್ವೇಷಣೆ ಪತ್ರಿಕೆಯ ಸಂಪಾದಕರಾದ ಆರ್.ಜಿ.ಹಳ್ಳಿ ನಾಗರಾಜ್ ಅವರು ಈ ನೃತ್ಯರೂಪಕವನ್ನು ರೂಪಿಸಿ ಆಯಾ ಗೀತೆಯ ಕಾಲಮಾನ, ಹಿನ್ನೆಲೆ, ವೈಶಿಷ್ಟ್ಯತೆಯನ್ನು ವಿವರಿಸುತ್ತ ನಿರೂಪಿಸಿದ ರೀತಿಯೂ ಅಭಿನಂದನೀಯವಾಗಿತ್ತು.

ದೆಹಲಿಯ ಕು. ಭೂಮಿಕಾ ಮತ್ತು ಕು. ಚಾಂದಿನಿ ಸುರೇಶ್ ಅವರು ಕುವೆಂಪು ಗೀತೆಗೆ ನೃತ್ಯ ಅಭಿನಯ ನೀಡಿದರು.

ಸಂಘದ ಸಹ ಕಾರ್ಯದರ್ಶಿ ಎನ್.ಆರ್. ಶ್ರೀನಾಥ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರ್ವಹಿಸಿದರು.



ದೆಹಲಿಯ ಕು. ಭೂಮಿಕಾ ಮತ್ತು ಕು. ಚಾಂದಿನಿ ಸುರೇಶ್ ಅವರ ಕುವೆಂಪು ಗೀತೆಗೆ ನೃತ್ಯ



ಉದಯ್‌ಕುಮಾರ್ ಶೆಟ್ಟಿ ಮತ್ತು ತಂಡ ಇವರಿಂದ ಕುವೆಂಪು ಗೀತೆಗಳ ನೃತ್ಯರೂಪಕ

## ಈ ಶತಮಾನದ ಸಾಂಸ್ಕೃತಿಕ ವಿದ್ಯಮಾನ-ಕುವೆಂಪು

ಏಪ್ರಿಲ್ 17 ಭಾನುವಾರದಂದು ಕುವೆಂಪು ನಾಟಕಗಳ ಕುರಿತಾದ ಗೋಷ್ಠಿಯ ಅಧ್ಯಕ್ಷತೆಯನ್ನು ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ವಹಿಸಿದ್ದರು. ಕುವೆಂಪು ನಾಟಕಗಳ ವಸ್ತು ಮತ್ತು ತಂತ್ರವನ್ನು ಕುರಿತು ರಂಗಾಯಣದ ನಿರ್ದೇಶಕ ಪ್ರೊ. ಲಿಂಗದೇವರು ಹಳೆಮನೆ ಮತ್ತು ಕುವೆಂಪು ನಾಟಕಗಳ ವೈಚಾರಿಕತೆ ಕುರಿತು ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕ ಡಾ. ಕೆ.ವೈ. ನಾರಾಯಣ ಸ್ವಾಮಿ ವಿಚಾರ ಮಂಡಿಸಿದರು. ಖ್ಯಾತ ಗಾಯಕಿ ರತ್ನಮಾಲಾ ಪ್ರಕಾಶ್, ಸಂಗೀತ ನಿರ್ದೇಶಕ ಎನ್.ಎಸ್. ಪ್ರಸಾದ್ ಮತ್ತು ದೆಹಲಿ ಕಲಾವಿದರು ಸುಮಧುರ ಕುವೆಂಪು ಗಾಯನದ ಮೂಲಕ ಗೋಷ್ಠಿಗೆ ಚಾಲನೆ ನೀಡಿದರು.



**ವಸ್ತು ಮತ್ತು ತಂತ್ರ :** ಪ್ರೊ. ಲಿಂಗದೇವರು ಹಳೆಮನೆ ಅವರು ಕುವೆಂಪು ನಾಟಕಗಳ ವಸ್ತು ಮತ್ತು ತಂತ್ರ ಕುರಿತು ಮಾತನಾಡುತ್ತ "ಕುವೆಂಪು ತಮ್ಮ ಮೊದಲ ಕವನ ಸಂಕಲನ ಹೊರತರುವ ಮೊದಲೇ ಐದಾರು ನಾಟಕಗಳನ್ನು ಬರೆದು ಮುಗಿಸಿದ್ದರು. ಅವರ ಬೆರಳ್ಗೆ ಕೊರಳ್, ಶೂದ್ರತಪಸ್ವಿ, ಸ್ಮಶಾನ ಕುರುಕ್ಷೇತ್ರ, ಜಲಗಾರ ಮುಂತಾದ ನಾಟಕಗಳು ಪುರಾಣದಿಂದ ಆಯ್ದ ವಸ್ತುವಾದರೂ ಅವನ್ನು ಆಧುನಿಕ ಪುರಾಣವನ್ನಾಗಿಸುತ್ತಾರೆ. ವಾಸ್ತವವಾದಿ ನಾಟಕಗಳನ್ನು ಆರಿಸದೇ, ಪೌರಾಣಿಕ ವಸ್ತುಗಳನ್ನು ಆರಿಸಿ, ಸಮಕಾಲೀನ, ಸಾರ್ವಕಾಲಿಕ ಸತ್ಯಗಳನ್ನು ಪ್ರತಿಬಿಂಬಿಸಲು ಪ್ರಯತ್ನಿಸುತ್ತಾರೆ ಮತ್ತು ಪ್ರತಿಮಾ ಸೃಷ್ಟಿಯ ಮೂಲಕ ಚಿರಂತನವಾಗಿಸುತ್ತಾರೆ" ಎಂದು ಹೇಳಿದರು. ಕುವೆಂಪು ನಾಟಕಗಳನ್ನು ಅದರ ಆದರ್ಶ, ಶೂದ್ರ ಸಮಾಜದ ಪರಿವರ್ತನೆ ಮತ್ತು ಸ್ವಾತಂತ್ರ ಸಂಗ್ರಾಮ ಈ ಮೂರು ನೆಲೆಗಳಿಂದ ವಿಶ್ಲೇಷಿಸಿದ ಲಿಂಗದೇವರು ಅವರು ಆ ನಾಟಕಗಳ ಸುಧಾರಣಾವಾದಿ ನಿಲುವುಗಳನ್ನು ವಿವರಿಸಿದರು. ಕುವೆಂಪು ಅವರನ್ನು ಚಾತುರ್ವರ್ಣದ ಅಮಾನುಷ ಆಚರಣೆಗಳು ಬಹುವಾಗಿ ಕಾಡಿದ್ದನ್ನು ಅವರ ನಾಟಕಗಳಲ್ಲಿ ಕಾಣಬಹುದು. ಶೂದ್ರರಿಗೆ ತಪಸ್ಸಿನ ನಿರಾಕರಣೆ 'ಶೂದ್ರ ತಪಸ್ವಿ' ನಾಟಕದಲ್ಲಿ ಸುಧಾರಣಾ ತತ್ವ ಕಂಡ ಬಗೆಯನ್ನು ಲಿಂಗದೇವರು ನಿದರ್ಶನವಾಗಿ ನೀಡಿದರು ಹಾಗೂ ಕುವೆಂಪು ಒಮ್ಮೆ 'ಯಮನ ಸೋಲು' ನಾಟಕದಲ್ಲಿ ನಟಿಸಿದ್ದನ್ನು ಸ್ಮರಿಸಿದರು. ಇಂಗ್ಲಿಷ್ ಭಾಷೆಯಿಂದ ಪ್ರೇರಿತರಾಗಿ ಕನ್ನಡಕ್ಕೆ ಸರಳ ರಗಳೆಯನ್ನು ಮೊದಲು ಬಳಸಿಕೊಂಡ ಹೆಗ್ಗಳಿಕೆ ಕುವೆಂಪು ಅವರದು ಎಂದು ಅಭಿಮಾನದಿಂದ ನುಡಿದರು.



**ವೈಚಾರಿಕತೆ :** ಕುವೆಂಪು ನಾಟಕಗಳ ವೈಚಾರಿಕತೆಯನ್ನು ತಿಳಿಯಲು ಹೊಸ ಪರಿಭಾಷೆಯಿಂದ ಮತ್ತು ಕನ್ನಡ ಪರಂಪರೆಯಲ್ಲಿ ನಿರ್ದಿಷ್ಟ ಚೌಕಟ್ಟನ್ನು ನಿರ್ಮಿಸಿ ಕಂಡುಕೊಳ್ಳಬಹುದು ಎಂದು ಕೆ.ವೈ. ನಾರಾಯಣ ಸ್ವಾಮಿ ತಿಳಿಸಿದರು. ಕುವೆಂಪು ಅವರ ನಾಟಕದ ಅನನ್ಯತೆಯನ್ನು ವಿಮರ್ಶೆಯ ಖಡ್ಗದಿಂದ ಕತ್ತರಿಸಿ ದೋಷವನ್ನು ಕಾಣುವ ಕೆಲವು ವಿಮರ್ಶಕರು ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಬಿಕ್ಕಟ್ಟನ್ನು ಸೃಷ್ಟಿಸುತ್ತಿದ್ದಾರೆ. 'ಚಿನ್ನಮ್ಮನಿಗೆ ಹುಟ್ಟಿದ ಮಗು' ನಿದರ್ಶನದ ಮೂಲಕ ಹೇಗೆ ವಿಮರ್ಶಕರು ಕುವೆಂಪು ಮೌಢ್ಯ ಮತ್ತು ಪುನರ್ಜನ್ಮವನ್ನು ಒಪ್ಪಿಕೊಂಡಿದ್ದರು ಎಂಬುದನ್ನು ನಿರೂಪಿಸಿದ್ದಾರೆ ಮತ್ತು ತಪ್ಪಾಗಿ ತಿಳಿದಿದ್ದಾರೆ ಎಂಬುದನ್ನು ಉದಾಹರಿಸಿದರು. ಜಗತ್ತಿನ ಇತರ ಸಾಹಿತಿಗಳಿಗೆ ಹೋಲಿಸಿದರೆ ಮಾನವನ ದುರಂತ ಕಥೆಯನ್ನು ಕುವೆಂಪು ಹೇಳುವ ಬಗೆ ಹೊಸ ತಿಳುವಳಿಕೆಯನ್ನು ನೀಡಿದೆ ಎಂದು ನಾರಾಯಣ ಸ್ವಾಮಿ ವಿವರಿಸಿದರು.



ಆನಂತರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಕವಿ ಹಾಗೂ ನಾಟಕಕಾರರಾದ ಪ್ರೊ.ಎಚ್.ಎಸ್. ಶಿವಪ್ರಕಾಶ್ ಅವರು ಪ್ರಬಂಧಕಾರರು ಮಂಡಿಸಿದ ವಿಚಾರಗಳ ಕುರಿತು ಮಾತನಾಡುತ್ತ ಈ ತನಕವೂ ಕುವೆಂಪು ಅವರ ಸಮಗ್ರ

ಸಾಹಿತ್ಯದ ವಿಮರ್ಶೆಯಾಗಿಲ್ಲ. ಕುವೆಂಪು ಪ್ರಜ್ಞೆ ಅಖಂಡವಾದದ್ದು; ವಿಮರ್ಶೆ ಆಂಶಿಕವಾದದ್ದು. ಆದ್ದರಿಂದ ಅವರ ಕಾವ್ಯವನ್ನಾಗಲಿ, ಕಾದಂಬರಿ, ನಾಟಕವನ್ನಾಗಲೀ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು ಪೂರ್ಣದೃಷ್ಟಿಯಿಂದ ನೋಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಜಗತ್ತಿನ ಅತ್ಯಂತ ಶ್ರೇಷ್ಠವಾದ ನಾಟಕಗಳು ಕೂಡ ರಂಗಭೂಮಿಯನ್ನು ಗಮನದಲ್ಲಿಟ್ಟುಕೊಂಡು ಸೃಷ್ಟಿಸಿದ್ದಲ್ಲ. ಕುವೆಂಪು ನಾಟಕಗಳ ಭಾಷೆ ಅನಂತತೆಯ ಭಾಷೆ. ಷೇಕ್ಸ್‌ಪಿಯರ್‌ನಂತೆ ಕುವೆಂಪು ಪ್ರಬುದ್ಧವಾದ ಭಾಷೆಯ ವಾರಸುದಾರರಾಗಿ ಕನ್ನಡ ಪ್ರಜ್ಞೆಯನ್ನು ಹಿಗ್ಗಿಸಿ ಬೆಳೆಸಿದ್ದಾರೆ. ಭಾರತೀಯ ಸಾಹಿತ್ಯ ಸಂಪುಟಗಳಲ್ಲಿನ ಎಲ್ಲಾ ಭಾಷೆ, ಎಲ್ಲ ಕಾಲದೇಶಗಳನ್ನು ಮೀರಿದ ಕವಿ. ಕೃತಿಗಳಲ್ಲಿ ನವ್ಯತೆ ಮಾತ್ರವಲ್ಲ ಸನಾತನತೆಯೂ ಇದೆ. ಕುವೆಂಪು ಕಾಲಾತೀತವಾದರೂ ಕಾಲಕಾಲಕ್ಕೆ ಪ್ರಸ್ತುತವಾಗುತ್ತಾರೆ ಎಂಬ ಅಂಶವನ್ನು ಪ್ರೊ. ಶಿವಪ್ರಕಾಶ್ ಒತ್ತಿ ಹೇಳಿದರು.

ಕೇಂದ್ರೀಯ ಗ್ರಂಥಾಲಯದ ಅಧಿಕಾರಿ ಶ್ರೀ ವೈ. ಅವನೀಂದ್ರನಾಥ ರಾವ್ ಅವರು ಗೋಷ್ಠಿಯನ್ನು ನಿರ್ವಹಿಸಿದರು.

### ಕುವೆಂಪು ಕಲಾಕೃತಿ ಚಿತ್ರ ಪ್ರದರ್ಶನ

ಭೋಜನ ವಿರಾಮದ ನಂತರ ಕುವೆಂಪು ಅವರ ಸಾಹಿತ್ಯ ಕೃತಿಗಳಿಂದ ಪ್ರೇರಿತರಾಗಿ ಕನ್ನಡದ ಖ್ಯಾತ ಕಲಾವಿದರು ರಚಿಸಿರುವ ಕಲಾಕೃತಿಗಳ ಸ್ಲೈಡ್ ಪ್ರದರ್ಶನವನ್ನು ಪ್ರೊ. ಎಂ.ಎಚ್. ಕೃಷ್ಣಯ್ಯ ಅವರ ನಿರೂಪಣೆಯೊಂದಿಗೆ ಪ್ರದರ್ಶಿಸಲಾಯಿತು.




ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು

**ಸಂವಾದ :** ಪ್ರೊ. ಹಂಪನಾ, ಪ್ರೊ. ಪ್ರಭುಶಂಕರ, ಡಾ. ಎ. ಮುರಿಗೆಪ್ಪ, ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ಪ್ರಧಾನ ಗುರುದತ್, ಪ್ರೊ. ಎಚ್.ಎಸ್. ಶಿವಪ್ರಕಾಶ್, ಪ್ರೊ. ಕಮಲಾ ಹಂಪನಾ, ಡಾ. ಪುರುಷೋತ್ತಮ ಬಿಳಿಮಲೆ, ಪ್ರೊ. ಲಿಂಗದೇವರು ಹಳೆಮನೆ ಹಾಗೂ ಡಾ. ಕರೀಗೌಡ ಬೀಚನಹಳ್ಳಿ ಅವರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಗಂಭೀರ ಚರ್ಚೆಗೆ ಸಂವಾದ ಒಳಪಡದೆ, ಕುವೆಂಪು ಅವರೊಡನೆ ವಿದ್ವಾಂಸರು ತಾವು ಅನುಭವಿಸಿದ ಆಪ್ತ, ಅವಿಸ್ಮರಣೀಯ, ರಸಘಳಿಗೆಯನ್ನು ಸಭಿಕರೊಡನೆ ಹಂಚಿಕೊಂಡರು. ಕುವೆಂಪು ಅವರ ಹಾಸ್ಯಪ್ರಜ್ಞೆ, ಸಮಯಪ್ರಜ್ಞೆ ಮಾತ್ರವಲ್ಲದೇ ವೈಯಕ್ತಿಕ ಬದುಕಿನ ಹಲವು ಘಟನೆಗಳನ್ನು ಸ್ವಾರಸ್ಯಕರವಾಗಿ ತಿಳಿಸಿದರು. ಸಂವಾದ ಕಾರ್ಯಕ್ರಮವನ್ನು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಎಸ್. ಕೃಷ್ಣ ಭಟ್ ಅವರು ನಿರ್ವಹಿಸಿದರು.

**ಸಮಾರೋಪ :** ಮೂರು ದಿನಗಳ ಯಶಸ್ವಿ ಕುವೆಂಪು ಸಮಗ್ರ ನೋಟಕ್ಕೆ ಸಂಜೆ ತೆರೆ ಎಳೆಯಲಾಯಿತು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. ಹಂಪನಾ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯವು ಹೊರ ತಂದಿರುವ 'Selected Poems of Kuvempu' ಕೃತಿಯನ್ನು ಬಿಡುಗಡೆಗೊಳಿಸಿದರು. ಕೃತಿಯನ್ನು ಕುರಿತಂತೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಕೃತಿಯ ಸಹಸಂಪಾದಕ ಡಾ. ಕರೀಗೌಡ ಬೀಚನಹಳ್ಳಿ ಅವರು ಮಾತನಾಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ಮಾತಿನಲ್ಲಿ ಮಾಂತ್ರಿಕ ಶಕ್ತಿಯನ್ನು ತುಂಬುವ ಕುವೆಂಪು ಅವರ ಸಾಧನೆಯನ್ನು ಸಂಗೀತ, ನೃತ್ಯ, ಚಿತ್ರಕಲೆ, ವಿಚಾರಗೋಷ್ಠಿ ಮೊದಲಾದ ವಿವಿಧ ಪ್ರಕಾರಗಳಲ್ಲಿ



'Selected Poems of Kuvempu' ಕೃತಿ ಬಿಡುಗಡೆ

ಮೂರು ದಿನಗಳ ಕಾಲ ಪ್ರತಿಬಿಂಬಿಸುವ ಕಾರ್ಯ ಯಶಸ್ವಿಯಾದದ್ದು ತಮಗೆ ಅತೀವ ಸಂತಸ ತಂದಿದೆ ಎಂದರು.

ಬಿಡುಗಡೆಯಾದ ಕೃತಿಯ ಸಹ ಸಂಪಾದಕ, ಕುವೆಂಪು ಭಾಷಾ ಭಾರತಿಯ ಅಧ್ಯಕ್ಷ ಪ್ರೊ. ಪ್ರಧಾನ ಗುರುದತ್ ಅವರು ಕೃತಿಯ ಬಗ್ಗೆ ಮಾತನಾಡುತ್ತಾ ಸಾಹಿತ್ಯ ಬೇರೆ ಭಾಷೆಗಳಿಗೆ ತಲುಪಬೇಕಾದರೆ ಸಮರ್ಥವಾದ ಭಾಷಾಂತರ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಭಾಷಾ ಭಾರತಿ ಕಾರ್ಯ ಪ್ರವೃತ್ತವಾಗಿದೆ ಎಂದರು. ಕಾವ್ಯದ ಅನುವಾದ ಬಹಳ ಕಷ್ಟಕರವಾದ ಕೆಲಸ. ಸಂಸ್ಕೃತಿಯ ಪರಿಚಯವಿಲ್ಲದಿದ್ದರೆ ಅನುವಾದ ಅರ್ಥಪೂರ್ಣವಾಗದು. ಭಾಷಾಂತರ ಸರಿಯಾಗದಿದ್ದರೆ ಮೂಲ ವಸ್ತುವಿಗೆ ಅಪಚಾರವೆಸಗಿದಂತೆ ಎಂದು ಸೋದಾಹರಣವಾಗಿ ವಿವರಿಸಿದರು. ಕುವೆಂಪು ಅವರ ರಾಮಾಯಣ ದರ್ಶನಂ, ಊರ್ಮಿಳಾ ಮೊದಲಾದ ಕೃತಿಗಳ ಅನುವಾದದೊಡನೆ ಪ್ರಾರಂಭವಾದ ತಮ್ಮ ಮೂರು ದಶಕಗಳ ಒಡನಾಟವನ್ನು ಸ್ಮರಿಸುತ್ತಾ ಗುರುದತ್ ಅವರು ಸಮರ್ಥ ಭಾಷಾಂತರ ಕುರಿತಂತೆ ಹಾಮಾನಾ, ದೇಜಗೌ ಅವರೊಡನೆ ಕುವೆಂಪು ಅವರು ಗಂಭೀರವಾಗಿ ಚರ್ಚಿಸುತ್ತಿದ್ದರು ಎಂಬುದಾಗಿ ತಿಳಿಸಿದರು.

"ಒಂದೇ ವೇದಿಕೆಯ ಮೇಲೆ 5 ಜನ ಕುವೆಂಪು ಅವರ ನೇರ ಶಿಷ್ಯರು, ಸಾಹಿತಿಗಳನ್ನು ಕಂಡದ್ದು ದೆಹಲಿ ಕನ್ನಡಿಗರ ಸೌಭಾಗ್ಯ. ಸಾಂಸ್ಕೃತಿಕ ಸಮುಚ್ಚಯವನ್ನು ಕಟ್ಟುವ ಕನಸು ಇಂತಹ ಕಾರ್ಯಕ್ರಮದ ಮೂಲಕ ಸಾಕಾರಗೊಂಡಿದೆ" ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ತಿಳಿಸಿದರು. ವೈವಿಧ್ಯಮಯ ವಿಚಾರ, ಗಾಯನ, ನೃತ್ಯಗಳ ಮೂಲಕ ಕುವೆಂಪು ಸಮಗ್ರ ನೋಟ ನೀಡಿದ ಕುವೆಂಪು ಪ್ರತಿಷ್ಠಾನಕ್ಕೆ ಹೃತ್ಪೂರ್ವಕ ಧನ್ಯವಾದ ಸಮರ್ಪಿಸಿದರು.

ಸಮಾರೋಪದ ಅಧ್ಯಕ್ಷತೆ ವಹಿಸಿದ್ದ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಹಂಪನಾ ಅವರು ಮೈಮನಗಳ ಸುಳಿಯಲ್ಲಿ ಕುವೆಂಪು ಅವರನ್ನು ಧ್ಯಾನಿಸಿಕೊಂಡು ಕಳೆದ 3 ದಿನಗಳು ಅವಿಸ್ಮರಣೀಯ, ಅಭಿನಂದನಾರ್ಹ ಎಂದು ಸಂತಸ ವ್ಯಕ್ತಪಡಿಸಿದರು. ಪಾಶ್ಚಿಮಾತ್ಯ ಅಧ್ಯಯನದಿಂದ ವಿಮರ್ಶಾ ಪ್ರಜ್ಞೆಯನ್ನು ಹರಿತಗೊಳಿಸಿ ಪರಿವರ್ತಿಸಿದ ಕುವೆಂಪು ಒಣ ಭೂಮಿಯಂತಿದ್ದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಸಿರು ಕ್ರಾಂತಿಯನ್ನು ಮಾಡಿದ ನೇಗಿಲ ಯೋಗಿ ಎಂದು ಬಣ್ಣಿಸಿದರು. ಕಾರ್ಯಕ್ರಮವನ್ನು ಸಾರ್ಥಕ ಗೊಳಿಸಿದ್ದಕ್ಕಾಗಿ ತಮ್ಮ ಮನದಾಳದ ಅಭಿನಂದನೆಯನ್ನು ಸಲ್ಲಿಸಿದರು.

ಮೂರು ದಿನಗಳ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಿದ ಪ್ರತಿಯೊಬ್ಬರಿಗೂ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಅವರು ಹೃದಯಪೂರ್ವಕ ಧನ್ಯವಾದಗಳನ್ನು ಸಮರ್ಪಿಸಿದರು. ಸಮಾರೋಪ ಸಮಾರಂಭವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಹಿ.ಚಿ. ಬೋರಲಿಂಗಯ್ಯ ಅವರು ನಿರ್ವಹಿಸಿದರು.

**ರಾಮಾಯಣ ದರ್ಶನಂ ಗಮಕ ವಾಚನ :** ರಾಮ-ಸೀತೆ-ಲಕ್ಷ್ಮಣರು ವನವಾಸದಲ್ಲಿದ್ದಾಗ, ಸೀತೆ ಅಡುಗೆ ಮಾಡಲು ಪರದಾಡುವ ಒಂದು




ಸಂಗೀತ ತರಬೇತಿ ಶಿಬಿರದಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ ದೆಹಲಿಯ ಕಲಾವಿದರು

ಮನೋಹರ ಪ್ರಸಂಗವನ್ನು ಶ್ರೀಮತಿ ಜಲಜರಾಜು ಅವರು ಕೇಳುಗರ ಮನಮುಟ್ಟುವಂತೆ ಸುಶ್ರಾವ್ಯವಾಗಿ ವಾಚಿಸಿದರು. ಡಾ. ಪುರುಷೋತ್ತಮ ಬಿಳಿಮಲೆ ಅವರು ಸರಳವಾಗಿ, ವಿದ್ವತ್ಪೂರ್ಣವಾಗಿ, ಅರ್ಥಗರ್ಭಿತವಾಗಿ ವ್ಯಾಖ್ಯಾನಿಸಿದರು. ಜಲಜರಾಜು ಅವರ ವಾಚನ ಹಾಗೂ ಬಿಳಿಮಲೆ ಅವರ ವ್ಯಾಖ್ಯಾನ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ ಸಭಿಕರ ಅಪಾರ ಪ್ರಶಂಸೆಗೆ ಪಾತ್ರವಾಯಿತು.

**ಕುವೆಂಪು ಗೀತಗಾಯನ :** 'ಓ ನನ್ನ ಚೇತನ', 'ಬಾರಿಸು ಕನ್ನಡ ಡಿಂಡಿಮವ', 'ಹಾಲು ಹಳ್ಳ ಹರಿಯಲಿ', 'ಎಲ್ಲಾದರು ಎಂತಾದರು ಇರು' ಕುವೆಂಪು ಗೀತೆಗಳನ್ನು ರತ್ನಮಾಲಾ ಪ್ರಕಾಶ್, ಸಂಗೀತ ನಿರ್ದೇಶಕ ಎನ್. ಎಸ್. ಪ್ರಸಾದ್ ಅವರ ನೇತೃತ್ವದಲ್ಲಿ ದೆಹಲಿ ಕಲಾವಿದರು ಹಾಡಿ ಮೆಚ್ಚುಗೆ ಪಡೆದರು. ರತ್ನಮಾಲಾ ಪ್ರಕಾಶ್ ಹಾಗು ಸಂಗೀತ ನಿರ್ದೇಶಕ ಎನ್.ಎಸ್. ಪ್ರಸಾದ್ ಅವರು ಮೂರು ದಿನಗಳ ಕಾಲ ದೆಹಲಿ ಕಲಾವಿದರಿಗೆ ತರಬೇತಿ ನೀಡಿ ದಿನಕ್ಕೊಂದು ವೈವಿಧ್ಯಮಯ ಗಾಯನವನ್ನು ನೀಡಿ ದೆಹಲಿ ಕನ್ನಡಿಗರನ್ನು ಆನಂದ ಪರವಶಗೊಳಿಸಿದರು. ದೆಹಲಿ ಮಹಿಳೆಯರ ಉತ್ಸಾಹದ ಪಾಲ್ಗೊಳ್ಳುವಿಕೆ ಮೂರು ದಿನಗಳ ಕಾರ್ಯಕ್ರಮಕ್ಕೆ ಮೆರಗು ತಂದಿತ್ತು.

ನಂತರ ಖ್ಯಾತ ಗಾಯಕಿ ರತ್ನಮಾಲಾ ಪ್ರಕಾಶ್ ಅವರು ಸಂಗೀತ ನಿರ್ದೇಶಕ ಎನ್.ಎಸ್. ಪ್ರಸಾದ್ ಅವರ ವಾದ್ಯ ನೆರವಿನೊಂದಿಗ ಹಲವು ಕುವೆಂಪು ಗೀತಗಳನ್ನು ಸುಮಧುರವಾಗಿ ಹಾಡಿ ರಂಜಿಸಿದರು. ಕುವೆಂಪು ಅವರ ಕವನಗಳನ್ನು ಹಿರಿಯ ಸಾಹಿತಿ ಡಾ. ಕಮಲಾ ಹಂಪನಾ ಅವರು ವಾಚಿಸಿದರು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿ ಸದಸ್ಯ ಆರ್. ರೇಣುಕುಮಾರ್ ಅವರು ನಿರ್ವಹಿಸಿದರು.

ಮಲೆನಾಡಿನ ನಿಸರ್ಗ ಚಿತ್ರಣ, ಕಣ್ಮನ ತಣಿಸಿದ ಅದ್ಭುತ ನೃತ್ಯ–ಗಾಯನ, ಹೃನ್ಮನ ಮುಟ್ಟಿದ ಕುವೆಂಪು ಸಾಹಿತ್ಯ ಭಂಡಾರ ಮೂರು ದಿನಗಳ ಕಾಲ ದೆಹಲಿ ಕರ್ನಾಟಕ ಸಂಘವನ್ನು ಸಂಪೂರ್ಣ ಕುವೆಂಪುಮಯವನ್ನಾಗಿಸಿದ್ದು ಸಂಘದ ಚಾರಿತ್ರಿಕ ಪುಟಗಳಲ್ಲಿ ದಾಖಲಾಯಿತು. ಅವಿಸ್ಮರಣೀಯ ಅನುಭವದಿಂದ, ಕುವೆಂಪು ಲೋಕದಿಂದ, ಕನ್ನಡಮಯ ವಾತಾವರಣದಿಂದ ದೆಹಲಿಯ ಸಹಜ ಸ್ಥಿತಿಗೆ ಮರಳಲು ಮತ್ತೆ ಮೂರು ದಿನಗಳು ಬೇಕಾದವು ಎಂಬುದು ಅತಿಶಯೋಕ್ತಿಯೇನಲ್ಲ!!!

❑ ಉಷಾ ಭರತಾದ್ರಿ
ರೇಣುಕಾ ನಿಡಗುಂದಿ



ಜಲಜರಾಜು ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಅವರಿಂದ ಗಮಕ ವಾಚನ



ರತ್ನಮಾಲಾ ಪ್ರಕಾಶ್ ಮತ್ತು ಎನ್.ಎಸ್. ಪ್ರಸಾದ್ ಅವರಿಂದ ಸುಗಮ ಸಂಗೀತ

ಅನುಭವ

# ವಿಶ್ವಕನ್ನಡ ಸಮ್ಮೇಳನಕ್ಕೆ ದೆಹಲಿಯಿಂದ ರಂಗಯಾತ್ರೆ

## ಒಂದು ವಿಶಿಷ್ಟ ಅನುಭವ

ಕರ್ನಾಟಕ ಸರ್ಕಾರ ಮಾರ್ಚ್ 11,12 ಮತ್ತು 13ರಂದು ವಿಶ್ವಕನ್ನಡ ಸಮ್ಮೇಳನವನ್ನು ಬೆಳಗಾವಿಯಲ್ಲಿ ಸಂಘಟಿಸಿತ್ತು. ದೂರದ ದೆಹಲಿಯಲ್ಲಿ ಕುಳಿತು ಈ ಮಹಾಸಮ್ಮೇಳನದ ಸ್ವರೂಪ ಮತ್ತು ಉದ್ದೇಶಗಳನ್ನು ನಾನು ಎಲ್ಲರಂತೆ ಕುತೂಹಲ ಮತ್ತು ನಿರೀಕ್ಷೆಗಳಿಂದ ನೋಡುತ್ತಿದ್ದೆ. ಇನ್ನು ಎರಡು ವಾರವಷ್ಟೇ ಉಳಿದಿತ್ತು. ಅಲ್ಲಿಯವರೆಗೂ ಒಬ್ಬ ಸಾಮಾನ್ಯ ಪ್ರೇಕ್ಷಕನಾಗಿ ಅಲ್ಲಿ ಭಾಗವಹಿಸುವೆ ಎಂದು ಭಾವಿಸಿರಲಿಲ್ಲ.

ಆದರೆ ಕೊನೆ ಘಳಿಗೆಯಲ್ಲಿ ಚಿತ್ರ ಬದಲಾಗಿತ್ತು. ರಂಗ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರ ಒಂದು ದೂರವಾಣಿ ಕರೆ ನನ್ನನ್ನು ದೆಹಲಿ ಕನ್ನಡಿಗರ ಒಂದು ಸಾಂಸ್ಕೃತಿಕ ತಂಡದ ಸದಸ್ಯನಾಗಿ ಪಾಲ್ಗೊಳ್ಳುವಂತೆ ಮಾಡಿತು. ಈಗಾಗಲೇ 'ಹಂಪಿ ಉತ್ಸವ' ಸೇರಿದಂತೆ ಒಟ್ಟು 7 ಯಶಸ್ವಿ ಪ್ರಯೋಗಗಳನ್ನು ಕಂಡ ದೆಹಲಿಯ ದಿನಕರ ತಂಡದ 'ನಾ ಸತ್ತಿಲ್ಲ' ಈ ಬಾರಿ ಬೆಳಗಾವಿಯಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ಇಂಗಳೇಶ್ವರ ಅವರು ಹೇಳಿದಾಗ ಹೆಮ್ಮೆಯೆನಿಸಿತು. ಜೊತೆಗೆ ಒಂದು ಪ್ರಮುಖ ಪಾತ್ರದಲ್ಲಿ ನಾನು ನಟಿಸಬೇಕೆಂದು ಅವರು ಹೇಳಿದಾಗ ನನಗೆ ಅಚ್ಚರಿ ಮತ್ತು ಹರ್ಷ. ಆದರೆ ಹಲವು ವರ್ಷಗಳ ನಂತರ ನಾಟಕದಲ್ಲಿ ಬಣ್ಣ ಹಚ್ಚುವುದು ಮತ್ತು ನಾಡಿನ ಐತಿಹಾಸಿಕ ಕ್ಷಣಗಳಲ್ಲಿ ಪ್ರದರ್ಶನ ನೀಡುವುದು ವೈಯಕ್ತಿಕವಾಗಿ ನನಗೆ ಒಂದು ಸವಾಲಾಗಿತ್ತು. ಅಲ್ಲದೆ ಸಮಯದ ಅಭಾವ ನನ್ನಂತೆ ತಂಡದ ಇತರ ಸದಸ್ಯರಿಗೂ ಕಾಡುತ್ತಿತ್ತು. ಆದರೆ ಅನುಭವೀ ನಿರ್ದೇಶನ, ಅನನ್ಯ ಕನ್ನಡ ಪ್ರೀತಿ ಮತ್ತು ನಮ್ಮೊಳಗಿನ ಸ್ನೇಹ ಸಾಮರಸ್ಯ ಬೆರೆತು ದೆಹಲಿ ಕನ್ನಡಿಗರು ಬೆಳಗಾವಿಯಲ್ಲಿ ಸ್ಮರಣೀಯ ಪ್ರದರ್ಶನ ನೀಡಲು ಕಾರಣವಾಯಿತು. ನಿಜವಾಗಲೂ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಪ್ರತಿಭೆಯನ್ನು ಎತ್ತಿ ಹಿಡಿದ ಕಲಾವಿದರ ತಂಡದಲ್ಲಿ ನಾನೂ ಒಬ್ಬ ಸದಸ್ಯ ಎನ್ನುವುದು ನನಗೆ ತೃಪ್ತಿ ಹಾಗೂ ಸಂತೋಷ ನೀಡಿದೆ.

ದೆಹಲಿಯಿಂಧ ಹೊರಡುವ ಮೊದಲು ಕೇವಲ 10ದಿನಗಳ ಅವಧಿಯಲ್ಲಿ ಬಿರುಸಿನ ರಂಗ ತಾಲೀಮು ಜರುಗಿತು. ತಂಡದ ಬಸವಣ್ಣಿ ಹುಂಡ್ರಿ, ಬಂಡೆಪ್ಪ ಬಿರಾದಾರ್, ಗೋವಿಂದರಾಜ್ ನಾನು ಮತ್ತು ಶಶಿಕಾಂತ ಪಾಟೀಲರು ಈ ನಾಟಕಕ್ಕೆ ಹೊಸಬರು. ನಮ್ಮೆಲ್ಲರನ್ನು ಕಡಿಮೆ ಅವಧಿಯಲ್ಲಿ ಅಭಿನಯ ಮತ್ತು ಸಂಭಾಷಣೆಗೆ ಸಜ್ಜುಗೊಳಿಸಿದವರು ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರು. ಪ್ರತಿದಿನ ರಾತ್ರಿ 9ರವರೆಗೂ ರಿಹರ್ಸಲ್ ನಡೆಯುತ್ತಿತ್ತು. ಬೆಳಗಾವಿಗೆ ಹೊರಡಲು ಎರಡು ದಿನ ಮೊದಲು ನೂತನ 'ಜನಶ್ರೀ' ಛಾನೆಲ್ ಕಿರು ಚಿತ್ರೀಕರಣ ನಡೆಸಿತು. ಜನಶ್ರೀಯ ದೆಹಲಿಯ ಪ್ರತಿನಿಧಿ ಕೆ. ರಾಘವ ಶರ್ಮ ಅವರು ನಮ್ಮ ತಂಡದ ಶ್ಯಾಮಸುಂದರ್, ಟಿ.ಎಸ್. ರಮೇಶ್, ಶಿವಾನಂದ ಇಂಗಳೇಶ್ವರ ಹಾಗೂ ನನ್ನ ಕಿರು ಸಂದರ್ಶನ ನಡೆಸಿದ್ದು ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸಿತು.

ದೆಹಲಿ ಕರ್ನಾಟಕ ಸಂಘವನ್ನು ಪ್ರತಿನಿಧಿಸಿ ಬೆಳಗಾವಿಗೆ ಹೊರಟ 16ಜನರ ನಮ್ಮ ಸಾಂಸ್ಕೃತಿಕ ತಂಡದ ಪ್ರಯಾಣ ಒಂದರ್ಥದಲ್ಲಿ 'ರೈಲಿನಲ್ಲೇ ಕನ್ನಡ ಸಮ್ಮೇಳನ'ವಾಗಿ ಮಾರ್ಪಟ್ಟಿತ್ತು. ಅಲ್ಲಿ ಸಂಗೀತ, ಗಾಯನ, ನಾಟಕ, ಹಾಸ್ಯ ಎಲ್ಲವೂ ನಿರಂತರವಾಗಿ ನಡೆಯುತ್ತಿತ್ತು. ಇದರಿಂದ ಅಕ್ಕಪಕ್ಕದ ಬೋಗಿಯ ಪ್ರಯಾಣಿಕರು ಉಚಿತವಾಗಿ ಮನರಂಜನೆ ಪಡೆದರು. ತಂಡದ ಅಮರೇಶರ ಜನಪದ ಹಾಡುಗಳು, ಭೀಮಸೇನ ಭಜಂತ್ರಿಯವರ ಸುಶ್ರಾವ್ಯ ಗಾಯನ, ಟಿ.ಎಸ್. ರಮೇಶರ ಸಂಗೀತ, ಎಸ್. ಕುಮಾರ್ ಅವರ ಹಾಸ್ಯ ಮತ್ತು ತಂಡದ ಇತರರ ಸಂಭಾಷಣೆಗಳು ಪ್ರಯಾಣದ ಆಯಾಸವನ್ನು ಮರೆಯುವಂತೆ ಮಾಡಿತು. ನಮ್ಮಿಂದ ಸ್ಫೂರ್ತಿಗೊಂಡು ರೈಲಿನಲ್ಲಿದ್ದ ಹಿರಿಯ ಚಿತ್ರನಟರೊಬ್ಬರು ತನ್ಮಯತೆಯಿಂದ ಒಂದು ನಾಟಕದ ಸಂಭಾಷಣೆಯನ್ನು ಎಲ್ಲರೆದುರು ಪ್ರಸ್ತುತಪಡಿಸಿದರು.

ಬೆಳಗಾವಿಗೆ ತಲುಪಿದ ನಮ್ಮ ತಂಡ ಮರುದಿನ ಅಂದರೆ, 13.03.2011ರಂದು ಅಲ್ಲಿನ ಫೌಂಡರಿ ಕ್ಲಸ್ಟರ್ ಸಭಾಂಗಣದಲ್ಲಿ 'ನಾ ಸತ್ತಿಲ್ಲ' ನಾಟಕ ಪ್ರದರ್ಶನ ನೀಡಬೇಕಿತ್ತು. ಅದಾಗಲೇ ಸುಮಾರು ಐವತ್ತು ದೂರವಾಣಿ ಕರೆಗಳನ್ನು ಸಮ್ಮೇಳನದ ಸಂಘಟಕರಿಗೆ ಮಾಡಿ ನಾವು ಕಲಾವಿದರು ತಂಗಲು ವ್ಯವಸ್ಥೆ, ಊಟ ಇತ್ಯಾದಿಗಳು ಸರಿಯಾಗಿರುವಂತೆ ಶಿವಾನಂದ ಇಂಗಳೇಶ್ವರ ನೋಡಿಕೊಂಡಿದ್ದರು. ಕರ್ನಾಟಕದ ಸ್ಥಳೀಯ ಮಿತ್ರರೊಡನೆ ಸಂಪರ್ಕ ಸಾಧಿಸಿ ಅವರು ಅನೇಕ ಆತಂಕಗಳನ್ನು ನೀಗಿಸಿದ್ದರು.

ಸಮಾರೋಪದ ದಿನ ನಮ್ಮ ಪ್ರದರ್ಶನ ಅನನ್ಯವಾಗಿತ್ತು. ಆರಂಭದಲ್ಲಿ ನಮ್ಮ ಸುಗಮ ಸಂಗೀತ ತಂಡ 'ಆಲಿಸಿ, ದೆಹಲಿಯ ಕೊರಳಿನ ಕರೆ' ಪ್ರಸ್ತುತಪಡಿಸಿದ ನಂತರ, 'ನಾ ಸತ್ತಿಲ್ಲ' ನಾಟಕ ಆಡಿದೆವು. ರಾತ್ರಿ 10ಗಂಟೆಯವರೆಗೂ ಪ್ರೇಕ್ಷಕರು ತುಂಬಿದ ಸಭಾಂಗಣದಲ್ಲಿ ನಮ್ಮ ಕಾರ್ಯಕ್ರಮಗಳನ್ನು ನೋಡಿ ಆನಂದಿಸಿದರು. 'ವೃತ್ತಿಪರ ರಂಗ ತಂಡಗಳನ್ನೂ ಮೀರಿಸಿದ ಶ್ರೇಷ್ಠ ಪ್ರದರ್ಶನ' ಎಂಬುದಾಗಿ ನಾಟಕ ನೋಡಿದ ಖ್ಯಾತ ನಾಟಕಕಾರ, ವಿಮರ್ಶಕ ಡಾ. ರಾಮಕೃಷ್ಣ ಮರಾಠೆ ಅವರು ತಿಳಿಸಿದರು. 'ನ್ಯಾಯಾಧೀಶ'ರ ಪಾತ್ರಕ್ಕೆ ನಾನು ಘನತೆಯನ್ನು ನೀಡಿದ್ದಾಗಿ ಡಾ. ಮರಾಠೆ ಅವರು ಹೇಳಿದ್ದು, ವೈಯಕ್ತಿಕವಾಗಿ ಬಹುಮಾನ ದೊರಕಿದ ಖುಷಿ ನೀಡಿತು. ಎಲ್ಲಕ್ಕಿಂತ ಹೆಚ್ಚು ಲಕ್ಷಾಂತರ ಕನ್ನಡಿಗರನ್ನು ಒಂದೆಡೆ ಸೇರಿಸಿ ಶಿಸ್ತುಬದ್ಧವಾಗಿ ಸಮ್ಮೇಳನ ಸಂಘಟಿಸಿದ ಕರ್ನಾಟಕ ಸರ್ಕಾರ ದೇಶಕ್ಕೆ ಮಾದರಿಯಾಯಿತು.

ಈ ರಂಗಯಾತ್ರೆಯಿಂದ ದೊರೆತ ಫಲವೇನು? ರಂಗ ಪರಿಕರಗಳ ಮೂಟೆ ಹೊತ್ತು ಸಾಗಿದ ನಮ್ಮ ತಂಡ ಅದನ್ನು ಹತ್ತಿ ಇಳಿಸಿ, ಕೊನೆಗೆ ಯಶಸ್ವಿ ಪ್ರದರ್ಶನ ನೀಡಿತು. ಇದರಿಂದ ದೊರೆತ ಧನ್ಯತಾ ಭಾವ, ಕಲಾ ರಸಿಕರ ಕೈ ಚಪ್ಪಾಳೆ, ವಿವಿಧ ಅಭಿರುಚಿಯ ಕಲಾವಿದರ ಒಡನಾಟ. . . ಇವೆಲ್ಲವೂ ನೆನಪಿನ ಪುಟಗಳಲ್ಲಿ ಶಾಶ್ವತ.

❑ ವೈ ಅವನೀಂದ್ರನಾಥ ರಾವ್

ಅಭಿನಂದನೆ

# ಸಖಾರಾಮ ಉಪ್ಪೂರು ಅವರ ಸಂಪಾದಿತ ಕೃತಿ ಬಿಡುಗಡೆ



ಮಾರ್ಚ್ 31, 2011ರಂದು ಶ್ರೀ ಸಖಾರಾಮ ಸೋಮಯಾಜಿ ಉಪ್ಪೂರು ಅವರು ಸಂಪಾದಿಸಿರುವ "ಭಾರತದಲ್ಲಿ ಅಭಿವೃದ್ಧಿ ಯೋಜನೆಗಳಿಂದಾಗಿ ಸ್ಥಳಾಂತರ, ಪುನರ್‌ವಸತಿ ಮತ್ತು ಪುನಃ ಸ್ಥಾಪನೆ: ಪ್ರಸಕ್ತ ಸಮಸ್ಯೆಗಳು ಮತ್ತು ಸವಾಲುಗಳು" ಎಂಬ ಕೃತಿ ರೌಟ್‌ಲೆಡ್ಜ್ ಲಂಡನ್‌ನಿಂದ ಪ್ರಕಾಶಿತಗೊಂಡಿದೆ. ಶ್ರೀ ಸಖಾರಾಮ ಸೋಮಯಾಜಿಯವರು ಶ್ರೀಮತಿ ಡಾ. ಸ್ಮೃತಿ ತಲವಾರರೊಡಗೂಡಿ ಸೃಷ್ಟಿಸಿರುವ ಈ ಕೃತಿಯಲ್ಲಿ ಕರ್ನಾಟಕವೂ ಸೇರಿದಂತೆ ದೇಶದ 6 ವಿವಿಧ ರಾಜ್ಯಗಳಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳಿಗಾಗಿ ನಡೆಯುತ್ತಿರುವ ಮತ್ತು ನಡೆದ ಭೂಮಿ ಅತಿಕ್ರಮಣ, ಸ್ಥಳಾಂತರ, ಪುನರ್‌ವಸತಿ ಮತ್ತು ಪುನಃಸ್ಥಾಪನೆಗೆ ಸಂಬಂಧಿಸಿದಂತೆ ವೈಜ್ಞಾನಿಕ ಲೇಖನಗಳಿವೆ. ಜವಾಹರಲಾಲ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿದ್ಯಾರ್ಥಿಯಾದ ಶ್ರೀ ಸಖಾರಾಮ ಮಧ್ಯಪ್ರದೇಶ, ಜಾರ್ಖಂಡ್, ಆಂಧ್ರಪ್ರದೇಶ, ಛತ್ತೀಸ್‌ಗಡ, ಒರಿಸ್ಸಾ ರಾಜ್ಯಗಳಲ್ಲಿ ಹಿಂದುಳಿದ ಮತ್ತು ಗುಡ್ಡಗಾಡು ಜನಾಂಗಗಳ ಸಾಮಾಜಿಕ ಅಭಿವೃದ್ಧಿಗಾಗಿ 2003ರಿಂದ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ 2006ರಲ್ಲಿ ಇವರು ಸಂಪಾದಿಸಿರುವ "ಜಾಗತೀಕರಣದ ಸಮಾಜಶಾಸ್ತ್ರ: ಭಾರತೀಯ ದೃಷ್ಟಿಕೋನಗಳು" ಮತ್ತು 2009ರಲ್ಲಿ ಸಂಪಾದಿಸಿರುವ ವಾತಾವರಣದ ಕಾಳಜಿಗಳು ಮತ್ತು ಸತತ ಅಭಿವೃದ್ಧಿ ಭಾರತದ ದೃಷ್ಟಿಕೋನಗಳು" ಎಂಬ ಪುಸ್ತಕಗಳು ಪ್ರಸಿದ್ಧಿಪಡೆದಿವೆ. ಈ ಎರಡೂ ಪುಸ್ತಕಗಳನ್ನು ಇವರು ಗೋವಾ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಗಣೇಶ ಸೋಮಯಾಜಿಯವರೊಡನೆ ಜೊತೆಯಾಗಿ ಸಂಪಾದಿಸಿದ್ದಾರೆ.

ಪ್ರಸ್ತುತ ಸಖಾರಾಮ ಅವರು ಜಾರ್ಖಂಡ್ ಮತ್ತು ಮಧ್ಯಪ್ರದೇಶಗಳಲ್ಲಿ ಬೃಹತ್ ಯೋಜನೆಗಳಿಂದಾಗಿ ಸ್ಥಳಾಂತರಗೊಳ್ಳುತ್ತಿರುವ ಸಹಸ್ರಾರು ಹಿಂದುಳಿದ ಮತ್ತು ಗುಡ್ಡಗಾಡು ಜನಾಂಗದವರ ಪುನರ್‌ವಸತಿ ಮತ್ತು ಪುನಃ ಸ್ಥಾಪನೆಗಾಗಿ ಯೋಜನೆಗಳನ್ನು ತಯಾರಿಸುವಲ್ಲಿ ಅಲ್ಲಿನ ಸರ್ಕಾರ ಮತ್ತು ಯೋಜನಾ ಅಧಿಕಾರಿಗಳ ಜೊತೆಗೆ ದುಡಿಯುತ್ತಿದ್ದಾರೆ. ಸಖಾರಾಮ ಅವರು ದೆಹಲಿಯ ಡಾ. ಆರ್.ಕೆ. ಪಚೌರಿಯವರ ನೇತೃತ್ವದ ಎನರ್ಜಿ ಮತ್ತು ರಿಸೋರ್ಸ್ ಸಂಸ್ಥೆಯಲ್ಲಿ ಹಿರಿಯ ಸಂಶೋಧಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾಗಿರುವ ಸಖಾರಾಮ ಅವರು ಪ್ರಸ್ತುತ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರು. ಸಖಾರಾಮ ಉಪ್ಪೂರು ಅವರು ತಮ್ಮ ಕಾರ್ಯಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರೈಸುತ್ತೇವೆ.

ಲೇಖನ

# ವಿಶ್ವಮಾನ್ಯ ತತ್ವಗಳ ಪ್ರತಿಪಾದಕ-ಬಸವಣ್ಣನವರು

**'ಕಾರ್ತಿಕದ ಕತ್ತಲಲಿ ಆಕಾಶ ದೀಪವಾಗಿ ನೀ ಬಂದೆ'**
**ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ**
**ಎಂಟು ಶತಮಾನಗಳ ಹಿಂದೆ. . . ಶ್ರೀ ಬಸವೇಶ್ವರಾ !**

ರಾಷ್ಟ್ರಕವಿ ಕುವೆಂಪು ಅವರು ತಮ್ಮ "ಶ್ರೀ ಬಸವೇಶ್ವರರಿಗೆ" ಎಂಬ ಕವನದಲ್ಲಿ ಜಾತಿ ಪದ್ಧತಿ, ಮೂಢನಂಬಿಕೆ, ಕಾಯಕತತ್ವ, ಸಾಮಾಜಿಕ ಅಸಮಾನತೆ ಮುಂತಾದವುಗಳನ್ನು ಕುರಿತು 800ವರ್ಷಗಳ ಹಿಂದೆಯೇ ಬಸವಣ್ಣನವರು ಪ್ರತಿಪಾದಿಸಿದ ಚಿಂತನೆಗಳು ಇಂದಿಗೂ ಎಷ್ಟು ಪ್ರಸ್ತುತ ಎಂಬದುನ್ನು ವ್ಯಕ್ತಪಡಿಸಿದ್ದಾರೆ.

ಬಸವಣ್ಣನವರು ಆಮೂಲಾಗ್ರ ಸಾಮಾಜಿಕ ಬದಲಾವಣೆಯ ಹರಿಕಾರ. ವಚನಗಳ ಮೂಲಕ ತಮ್ಮ ಸಾಮಾಜಿಕ, ಧಾರ್ಮಿಕ, ಆರ್ಥಿಕ ಚಿಂತನೆಗಳನ್ನು ಶ್ರೀಸಾಮಾನ್ಯನಿಗೂ ಅರ್ಥವಾಗುವಂತೆ ಪ್ರತಿಪಾದಿಸಿ ಕಣ್ತೆರೆಸುವ ಕೆಲಸ ಮಾಡಿದ್ದಾರೆ. ಹಾಗಾಗಿ ಅವರ ವಿಚಾರಧಾರೆಗಳು ಒಂದು ಪ್ರದೇಶ, ಜನಾಂಗ, ರಾಜ್ಯಗಳಿಗಷ್ಟೇ ಮಾತ್ರವಲ್ಲದೆ ಸೀಮಾತೀತವಾಗಿ ನಿಲ್ಲಬಲ್ಲಂತವುಗಳಾಗಿವೆ.

ಇಂದು ನಾವು ರೂಪಿಸಿಕೊಂಡಿರುವ ಮಾನವಹಕ್ಕುಗಳು ಮನುಷ್ಯನಿಗೆ ಬೇಕಾದ ಎಲ್ಲ ಮೂಲಭೂತ ಸ್ವಾತಂತ್ರ್ಯಗಳನ್ನು ದೊರಕಿಸಿಕೊಡಬೇಕೆಂಬವು. ಇವುಗಳು 1948ರಲ್ಲಿ ವಿಶ್ವಸಂಸ್ಥೆ ಜಾಗತಿಕ ಮಾನವ ಹಕ್ಕುಗಳು ಎಂದು ಘೋಷಿಸುವ ಮೂಲಕ ಜಾರಿಗೆ ಬಂದವು. ಈ ಮಾನವಹಕ್ಕುಗಳ ವಿಚಾರದಲ್ಲಿ ಯುರೋಪಿನಲ್ಲಿ ನಡೆದ ಪುನರುಜ್ಜೀವನ ಚಳವಳಿಗೂ ಮುನ್ನೂರು ವರ್ಷ ಮೊದಲೇ ಕರ್ನಾಟಕದಲ್ಲಿ ಬಸವಾದಿ ವಚನಕಾರರು ಪ್ರತಿಪಾದಿಸಿದ್ದರೆಂಬುದು ಹೆಮ್ಮೆಯ ಸಂಗತಿ. "ಎಲ್ಲ ಮನುಷ್ಯರು ಸ್ವತಂತ್ರವಾಗಿ ಜನಿಸಿದ್ದಾರೆ ಹಾಗೂ ಘನತೆ ಮತ್ತು ಹಕ್ಕುಗಳಲ್ಲಿ ಸಮಾನರಾಗಿದ್ದಾರೆ" ಎಂಬುದು ಮಾನವಹಕ್ಕುಗಳ ಮೂಲಸ್ತೋತ್ರ. ಆದರೆ ವಾಸ್ತವವಾಗಿ ಇಂದಿನ ಎಲ್ಲ ವರ್ಗಗಳ, ಎಲ್ಲ ಸಮಾಜಗಳ ಜನರಿಗೂ ಇವು ಸಿಗುತ್ತದೆಯೇ? ಎಂದು ನೋಡಿದರೆ ಉತ್ತರ ನಿರಾಶದಾಯಕ. ಏಕೆಂದರೆ ಪರಸ್ಪರರ ಅವಶ್ಯಕತೆ ಮತ್ತು ಹಕ್ಕುಗಳನ್ನು ಗೌರವಿಸುವಲ್ಲಿ ಬಹಳ ಮಂದಿ ಮಾನಸಿಕ ಅಸ್ಪ್ರಶ್ಯತೆಯನ್ನು ಅನುಸರಿಸುತ್ತಿದ್ದಾರೆ. ಅಂತಹವರನ್ನು ಕುರಿತು **"ಅನ್ಯರಿಗೆ ಅಸಹ್ಯ ಪಡಬೇಡ, ಇದಿರ ಹಳಿಯಲು ಬೇಡ, ತನ್ನ ಬಣ್ಣಿಸಬೇಡ"** ಎಂಬುದಾಗಿ ತಿಳುವಳಿಕೆ ಹೇಳುವ ಬಸವಣ್ಣನ ಚಿಂತನೆಗಳು ನಮಗೆ ಪ್ರಸ್ತುತವಲ್ಲವೇ?

ಪ್ರತಿಯೊಬ್ಬ ವ್ಯಕ್ತಿಯೂ ಜಾತಿ ಮತಗಳ ಭೇದ ಎಣಿಸದೇ ತನ್ನ ನೆರೆಹೊರೆಯವರೊಂದಿಗೆ ಬೆರೆತು ಬಾಳುವುದರಿಂದ ಸಮಾಜದಲ್ಲಿ ಸಹಭಾಗಿತ್ವ ಬೆಳೆಯಲು ಸಾಧ್ಯವಾಗುತ್ತದೆ ಮತ್ತು ಸಮಾಜದೊಂದಿಗೆ ತನ್ನನ್ನು ತಾನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇಂದು ಸಾಮಾಜಿಕ ಅಂತಸ್ತು, ಅಧಿಕಾರ, ನಗರ ಜೀವನ, ಕೌಟುಂಬಿಕ ವಿಘಟನೆಗಳು ಅಲ್ಲದೆ, ಬಡತನ, ನಿರುದ್ಯೋಗ ಮೊದಲಾದ ಕಾರಣಗಳಿಂದಾಗಿ, ಸಾಮಾಜಿಕ ಅಭದ್ರತೆ ಮತ್ತು ಭಾವನಾತ್ಮಕ ಅಭದ್ರತೆಯ ಆತಂಕ ಸಮಾಜದಲ್ಲಿ ಹೆಚ್ಚಾಗುತ್ತಿದೆ.

**"ಒಬ್ಬ ಕೆಂಚ, ಒಬ್ಬ ಕರಿಕ, ಒಬ್ಬ ಶುದ್ಧ ಧವಳಿತನೆಂತಯ್ಯಾ ಲಿಂಗವೇ?. . .**
**. . .ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ !**
**ಇವ ನಮ್ಮವ, ಇವನಮ್ಮವ, ಇವನಮ್ಮವನೆಂದಿನಿಸಯ್ಯಾ"**

ಎಂಬ ವಚನದಲ್ಲಿ ಇಂತಹ ಆತಂಕಗಳ ನಿವಾರಣೆಗೆ ಉತ್ತರವಿದೆ. ಬಸವಣ್ಣನವರು ಸಮಾಜದಲ್ಲಿದ್ದ ಅಸಮಾನತೆಯನ್ನು ಎತ್ತಿತೋರಿ ಪ್ರತಿಯೊಬ್ಬರೂ ಪರಸ್ಪರರಲ್ಲಿ ತಮ್ಮ ವೃತ್ತಿ ಮತ್ತು ಅಭಿರುಚಿಗಳನ್ನು ಪ್ರೀತಿಸುವಂತಾದಾಗ ಮಾತ್ರ ಸಮಾಜದ ಸರ್ವಾಂಗೀಣ ಪ್ರಗತಿ ಸಾಧ್ಯ ಎಂಬ ಸಂದೇಶ ನೀಡಿದ್ದಾರೆ. ಮಾನವನ ಹಿತಚಿಂತನೆ ಮಾಡುವಂತಹ ಸಾರ್ವತ್ರಿಕ ಮೌಲ್ಯಗಳನ್ನು ಚಿರಂತನವಾಗಿ ಉಳಿಸುವ ಕೆಲಸ ಮಾಡಿದ್ದಾರೆ.

"ಕಾಯಕ-ದಾಸೋಹ" ತತ್ವ ಬಸವಣ್ಣನವರ ಒಂದು ದೊಡ್ಡ ಚಿಂತನೆ. ಇಂದು ಕೆಲಸದ ಹಕ್ಕು ನಮ್ಮ ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ. ತನ್ನ ಕುಟುಂಬ ಘನತೆಯಿಂದ ಬಾಳಿ ಬದುಕಲು ಅಗತ್ಯವಾದ ಕೆಲಸವನ್ನು ಕೈಗೊಳ್ಳುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಇಂದು ಸರ್ಕಾರ ಜಾರಿಗೆ ತಂದಿರುವ ಉದ್ಯೋಗ ಖಾತ್ರಿ ಯೋಜನೆಯ ಹಿಂದಿರುವ ಘನ ಉದ್ದೇಶ ಕೂಡಾ ದೇಶದಲ್ಲಿನ ಪ್ರತಿಯೊಬ್ಬ ಪ್ರಜೆಯೂ ದುಡಿದು ಗಳಿಸಿದ ಸಂಪಾದನೆಯಲ್ಲಿ ತನ್ನ ಜೀವನ ಮಾಡಬೇಕು ಎಂಬುದಾಗಿದೆ. ಆದರೆ ಜನ ಶ್ರಮವಿಲ್ಲದ ದುಡಿಮೆಗೆ ಹಾತೊರೆಯುತ್ತಿದ್ದಾರೆ. ಇದು ಅಸಮಾನತೆಯನ್ನು ಹುಟ್ಟು ಹಾಕುತ್ತಿದೆ. ಮತ್ತೊಂದೆಡೆ ಜನರ ದುರಾಸೆ ಮತ್ತು ಲೋಭಗಳಿಂದಾಗಿ ಇಂತಹ ಘನೋದ್ದೇಶದಿಂದ ಕೂಡಿದ ಯೋಜನೆಗಳು ಸರಿಯಾದ ಗುರಿ ತಲುಪದೆ ಕೇವಲ ಕೆಲವು ಪಟ್ಟಭದ್ರರ ಸೊತ್ತಾಗಿದೆ. ಇದನ್ನು ತಪ್ಪಿಸಲು ಬಸವಣ್ಣನವರು ಕಾಯಕ ಮತ್ತು ದಾಸೋಹ ತತ್ವಗಳ ಮೂಲಕ ಶ್ರಮ ಮತ್ತು ಸಂಪತ್ತಿನ ಹಂಚಿಕೆಯಾಗಬೇಕೆಂಬ ಸಂದೇಶವನ್ನು ನೀಡಿದ್ದಾರೆ. ಅವರು ಹೇಳಿದ ಪ್ರಕಾರ ಶ್ರಮ ಬೌದ್ಧಿಕವೇ ಆಗಿರಲಿ, ಅಥವಾ ದೈಹಿಕವೇ ಆಗಿರಲಿ ಅದು ದೇಹಕ್ಕೇ ಸಂಬಂಧಿಸಿದುದರಿಂದ ಅದರಲ್ಲಿ ಭೇದ ಕಾಣಬಾರದು. ಹಾಗಾಗಿ ಕಮ್ಮಾರ ಮತ್ತು ಹಾರುವರಿಬ್ಬರ ಶ್ರಮವೂ ಒಂದೇ ಎಂದಿದ್ದಾರೆ. 'ಕಾಯಕ'ದ ಈ ಪರಿಕಲ್ಪನೆಯ ಮೂಲಕ ವೃತ್ತಿ ಸಮಾನತೆಯ ಸೂತ್ರವನ್ನು ಪ್ರತಿಪಾದಿಸಿದ್ದಾರೆ. ಆದ್ದರಿಂದ ವೃತ್ತಿಯಿಂದ ಒಬ್ಬ ಅಧಿಕಾರಿ, ಗುಮಾಸ್ತ, ಇಂಜಿನಿಯರ್, ಯಾರೇ ಆಗಿರಲಿ ಸಮಾಜದ ಏಳಿಗೆಗೆ, ಅವರೆಲ್ಲರ ಪಾತ್ರವೂ ಅಷ್ಟೇ ಮುಖ್ಯವೆಂಬುದನ್ನು ಹೇಳುವ 'ಕಾಯಕ ತತ್ವ' ಇಂದು ಪ್ರಸ್ತುತವೆನಿಸುತ್ತದೆ.

ಶ್ರಮದಿಂದ ಬಂದ ಸಂಪತ್ತನ್ನು ವಿನಿಯೋಗಿಸಲು ಬಸವಣ್ಣ 'ದಾಸೋಹ' ಪರಿಕಲ್ಪನೆ ನೀಡಿ ಸಂಪತ್ತಿನ ಕೇಂದ್ರೀಕರಣ ಅಸಮಾನತೆಗೆ ಎಡೆಮಾಡಿ ಕೊಡುತ್ತದಾದ್ದರಿಂದ ಅದನ್ನು ಗುರು, ಲಿಂಗ, ಜಂಗಮರಿಗೆ ಹಂಚುವ ಮೂಲಕ ಸಂಪತ್ತನ್ನು ವಿಕೇಂದ್ರೀಕರಿಸಬೇಕು ಎಂದು ಪ್ರತಿಪಾದಿಸಿದರು. 'ಉಳ್ಳವರು ಶಿವಾಲಯ ಮಾಡುವರು, ನಾನೇನ ಮಾಡಲಯ್ಯ ಎಂಬ ಬಸವಣ್ಣನವರ ವಚನ ಬಡವ-ಬಲ್ಲಿದರ ನಡುವೆ ಇರುವ ಅಂತರವನ್ನು ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಇಂತಹ ಆರ್ಥಿಕ, ಸಾಮಾಜಿಕ, ಅಸಮಾನತೆಯ ನಿರ್ಮೂಲನೆಗಾಗಿ **"ಸೀರೆಯೊಳಗೊಂದೆಳೆಯ, ಹೊನ್ನಿನೊಳಗೊಂದೆಳೆಯ ಇಂದಿಂದಿಗೆ, ನಾಳಿಂಗೆ ಎಂದು ತೆಗೆದಿಟ್ಟುಕೊಂಡರೆ ತಲೆದಂಡ"** ವೆಂದು ಪ್ರತಿಜ್ಞೆ ಮಾಡಿದರು. ಬಸವಣ್ಣನವರ ಚಿಂತನೆಗಳ ಪ್ರಾಮಾಣಿಕ ಅನುಷ್ಠಾನ ಮಾತ್ರ ಸಂಪತ್ತಿನ ಹಂಚಿಕೆ ಸಮಾನ ರೀತಿಯಲ್ಲಿ ಆಗಿ ಅದರ ಲಾಭ ಶೋಷಿತರಿಗೆ, ದಲಿತರಿಗೆ, ಹಿಂದುಳಿದ ವರ್ಗಗಳಿಗೆ ತಲುಪಲು ಸಾಧ್ಯ ಎಂಬುದರಲ್ಲಿ ಎರಡು ಮಾತಿಲ್ಲ.

ಬಸವಣ್ಣನವರ ಚಿಂತನೆಗಳನ್ನು ಆಧುನಿಕ ನೆಲೆಗಟ್ಟಿನಲ್ಲಿ ನಿಂತು ವಿಶಾಲ ದೃಷ್ಟಿಯಿಂದ ನೋಡುವ ಮತ್ತು ಪುನರ್‌ಮೌಲ್ಯೀಕರಣಕ್ಕೊಳಪಡಿಸುವ ಕೆಲಸ ಆದಾಗ ಮಾತ್ರ ವಿಶ್ವಮಾನ್ಯ ತತ್ವಗಳನ್ನು ಪ್ರತಿಪಾದಿಸಿದ ವಿಶ್ವಮಾನವ ಬಸವಣ್ಣನವರ ಜಯಂತಿಗೆ ನಿಜವಾದ ಅರ್ಥ ಬರುತ್ತದೆ.

❑ ಚಂದ್ರಶೇಖರ ಎನ್.ಪಿ.

## ಬೇಸಿಗೆ ರಜ-ಮಜ

**ರಜಕ್ಕೆ ಊರಿಗೆ ಹೋಗ್ತಾ ಇದ್ದೀರಾ? ಎಲ್ಲೆಲ್ಲಿ ಹೋಗಿದ್ರಿ? ಏನೇನು ನೋಡಿದ್ರಿ? ಹೇಗಿದೆ ನಿಮ್ಮೂರು? ಏನಂತಾರೆ ನಮ್ಮ ಜನ? ನಿಮ್ಮೂರು ಚಂದವೋ, ದೆಹಲಿ ಚಂದವೋ? ಊರಿನಿಂದ ಬಂದ್ಮೇಲೆ ನಿಮ್ಮ ರಜದ ಅನುಭವಗಳನ್ನು ನಮಗೆ ಬರೆದು ತಿಳಿಸಿ.**

## ಸದಸ್ಯರಲ್ಲಿ ಮನವಿ

**ಸಂಘದ ಕಾರ್ಯಕ್ರಮಗಳ ಆಮಂತ್ರಣ, ಅಭಿಮತವನ್ನು ನಿಮಗೆ ಇ-ಮೇಲ್ ಮೂಲಕ ಕಳುಹಿಸಲು ದಯಮಾಡಿ ನಿಮ್ಮ ಇ-ಮೇಲ್ ವಿಳಾಸ ನಮಗೆ ತಿಳಿಸಿ. dksangha@gmai.com ಗೆ ಕಳುಹಿಸಿ.**

# ದಿಲ್ಲಿಯಲ್ಲಿ ಯಶಸ್ವಿಯಾಗಿ ನಡೆದ 28ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ



ಪ್ರೊ. ಕೆ.ಎಸ್. ರಂಗಪ್ಪ, ಅವರು ದೀಪ ಬೆಳಗಿಸಿ ಸಮ್ಮೇಳನವನ್ನು ಉದ್ಘಾಟಿಸುತ್ತಿರುವುದು. ಬಾ. ಸಾಮಗ, ಗುರುಮೂರ್ತಿ, ಡಾ. ಜಿ. ಶಂಕರ್, ಎಂ.ಡಿ. ಮಲ್ಯ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡಾ. ಸರೋಜಿನಿ ಮಹಿಷಿ, ಜೀರಿಗೆ ಲೋಕೇಶ್, ಬೈಕೆರೆ ನಾಗೇಶ್ ಅವರನ್ನೂ ಕಾಣಬಹುದು.

ದಿಲ್ಲಿಯಲ್ಲಿ ಏಪ್ರಿಲ್ 9 ಮತ್ತು 10ರಂದು 28ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. 'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆದ ಈ ಸಮ್ಮೇಳನದಲ್ಲಿ ಕನ್ನಡ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತಲ್ಲದೆ ದೇಶದಾದ್ಯಂತ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ ಅವರು ಕನ್ನಡಿಗರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಇನ್ನಷ್ಟು ಭವ್ಯವಾಗಿ ಬೆಳೆಸಿ ಕರ್ನಾಟಕ ರಾಜ್ಯವನ್ನು ಭಾರತದ ಅಗ್ರಗಣ್ಯ ಹಾಗೂ ಆದರ್ಶ ರಾಜ್ಯವನ್ನಾಗಿ ಪರಿವರ್ತಿಸಬೇಕೆಂದೂ, ವಿಶ್ವದಲ್ಲೇ ಪ್ರತಿಭಾವಂತರಾಗಿರುವ ಕನ್ನಡಿಗರು ಕನ್ನಡದ ಮುಖ್ಯ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸಿ ಕನ್ನಡ ಸಾಹಿತ್ಯವನ್ನು ವಿಶ್ವಮಟ್ಟಕ್ಕೆ ಮುಟ್ಟಿಸಬೇಕೆಂದೂ ಕರೆ ನೀಡಿದರು.

ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ಕನ್ನಡಕ್ಕೆ ಇನ್ನೂ ಹೆಚ್ಚಿನ ಗೌರವ, ಮಾನ್ಯತೆ ದೊರಕಿಸಿ ಕನ್ನಡಿಗರಿಗೆ ಎಲ್ಲಾ ರಂಗಗಳಲ್ಲಿ ಲಭ್ಯವಾಗಬೇಕಾಗಿರುವ ನ್ಯಾಯ ಸಿಗುವಂತೆ ಮಾಡುವುದೇ ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರ ನೆನೆಗುದಿಯಲ್ಲಿರುವ ಕರ್ನಾಟಕದ ಎಲ್ಲ ಯೋಜನೆಗಳಿಗೆ ಕೂಡಲೇ ಅನುಮತಿ ನೀಡಿ ಕಾರ್ಯಗತಗೊಳಿಸಬೇಕೆಂದರು.

'ದೆಹಲಿ ಕನ್ನಡಿಗ' ಸಮ್ಮೇಳನ ಸಂಚಿಕೆ ಬಿಡುಗಡೆ ಮಾಡಿದ ಕೇಂದ್ರದ ಮಾಜಿ ಸಚಿವೆ ನಾಡೋಜ ಡಾ. ಶ್ರೀಮತಿ ಸರೋಜಿನಿ ಮಹಿಷಿ ಅವರು ಪತ್ರಿಕೋದ್ಯಮ ಕನ್ನಡ ಸಂಸ್ಕೃತಿಯ ಹಿತ ಸಾಧಿಸುವಲ್ಲಿ ಸರಿಯಾದ ಮಾರ್ಗದರ್ಶನ ಮಾಡಬೇಕಾಗಿದೆ ಎಂದರಲ್ಲದೆ ಕನ್ನಡಿಗರು ಸರಿಯಾಗಿ ಸಂಘಟಿತರಾಗಿ ದಿಲ್ಲಿಯಲ್ಲಿ ಕನ್ನಡ ಬೆಳೆಸಬೇಕಾಗಿದೆ ಎಂದು ಕರೆ ನೀಡಿದರು.

ಸಮ್ಮೇಳನದ ವಿವಿಧ ಕಾರ್ಯಕ್ರಮಗಳನ್ನು ದಿಲ್ಲಿಯ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್, ಸಾಹಿತಿ ಗುರುಮೂರ್ತಿ ಪೆಂಡಕೂರು, ಸಾಮಾಜಿಕ ಕಾರ್ಯಕರ್ತ ಜೀರಿಗೆ ಲೋಕೇಶ್ ಅವರು ಉದ್ಘಾಟಿಸಿದರು. ಸತ್ಯವಿಠಲರ "ಸದ್ಗುರು ಸಾಯಿ ದರ್ಶನ" ಪುಸ್ತಕವನ್ನು ಬೈಕೆರೆ ನಾಗೇಶ್ ಅವರು ಬಿಡುಗಡೆಗೊಳಿಸಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಜಾಗತೀಕರಣದ ಈ ಕಾಲದಲ್ಲಿ ಎಲ್ಲಾ ರಾಜ್ಯ ಭಾಷೆಗಳೂ ತಾಂತ್ರಿಕವಾಗಿ ಸಬಲಗೊಳ್ಳಬೇಕಾಗಿದ್ದು ಅದಕ್ಕಾಗಿ ಕೇಂದ್ರ ಸರ್ಕಾರ ರಾಜ್ಯಗಳ ಭಾಷೆಯ ತಂತ್ರಾಂಶ ಅಭಿವೃದ್ಧಿ ಪಡಿಸಲು ಉದಾರವಾಗಿ ಆರ್ಥಿಕ ಸಹಾಯ ಮಾಡಬೇಕೆಂದರಲ್ಲದೆ ಕನ್ನಡಿಗರು ನೆರೆಹೊರೆ ರಾಜ್ಯಗಳವರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವುದರೊಂದಿಗೆ ಹೊರ ರಾಜ್ಯಗಳಲ್ಲಿ ಪ್ರತೀ ವರ್ಷ ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಸುವುದು ಅವಶ್ಯವೆಂದರು.

**ಪ್ರಶಸ್ತಿ ವಿತರಣೆ :** ಸಮ್ಮೇಳನದಲ್ಲಿ ಬ್ಯಾಂಕ್ ಆಫ್ ಬರೋಡಾದ ಅಧ್ಯಕ್ಷ ಎಂ.ಡಿ. ಮಲ್ಯ ಅವರಿಗೆ 'ಶ್ರೇಷ್ಠ ಬ್ಯಾಂಕರ್', ಎಡನೀರು ಶ್ರೀಶ್ರೀ ಕೇಶವಾನಂದ ಭಾರತೀ ಸ್ವಾಮೀಜಿ ಅವರಿಗೆ 'ಶ್ರೇಷ್ಠ ಹೊರನಾಡ ಕನ್ನಡಿಗ', ಪ್ರಖ್ಯಾತ ಸಮಾಜ ಸೇವಕ ಡಾ. ಜಿ.ಶಂಕರ್ ಅವರಿಗೆ 'ಶ್ರೇಷ್ಠ ಸಾಮಾಜಿಕ ಕಾರ್ಯಕರ್ತ', ಸಿಂಡಿಕೇಟ್ ಬ್ಯಾಂಕಿನ ಮಹಾ ಪ್ರಬಂಧಕ ಕೆ. ದೇವಾನಂದ ಉಪಾಧ್ಯಾಯ ಅವರಿಗೆ 'ಶ್ರೇಷ್ಠ ದಿಲ್ಲಿ ಕನ್ನಡಿಗ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು ಹಾಗೂ ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಶ್ರೀಮತಿಯರಾದ ಡಾ. ವಸುಂಧರಾ ಭೂಪತಿ, ಡಾ. ಬಿದರಿ ಚಂದ್ರಭಾಗ, ಮೀರಾ ಮುಕುಂದ್, ಅನುಪಮಾ ರಾಘವೇಂದ್ರ, ತಾರಾ ಅಪ್ಪಚ್ಚು ಶರ್ಮ, ಸವಿತಾ ಇನಾಂದಾರ್, ಪಾರ್ವತಿ ಪೆಂಡಕೂರು, ಹೇಮಾ ಎನ್.ಭಟ್, ಅರ್ಪಣಾ ಎ. ಹುಕ್ಕೇರಿ, ನಮಿತಾ ಡಿ. ಉಪಾಧ್ಯಾಯ ಮತ್ತು ಶ್ರೀಯುತರಾದ ಗುರುಮೂರ್ತಿ ಪೆಂಡಕೂರು, ಅಶೋಕ್ ಆರ್. ಹುಕ್ಕೇರಿ, ಬಿ. ನಾಗಭೂಷನ್, ಪಿ. ನಾರಾಯಣ ಭಟ್, ಎನ್.ತಿಮ್ಮಪ್ಪ, ಸಿದ್ದಣ್ಣ ಜಿ. ಕನ್ನಡಿಗ, ಬಿ.ಸಿ. ರಾವ್, ಬಿ.ಎನ್. ಶೆಟ್ಟಿ, ಗೋಪಾಲಕೃಷ್ಣ ನಾಯರಿ ಇವರನ್ನು ಸನ್ಮಾನಿಸಲಾಯಿತು.

ನೆನಪು

# ಖ್ಯಾತ ಹಿಂದೂಸ್ತಾನಿ ಗಾಯಕ ಮಾಧವ ಗುಡಿ ವಿಧಿ ವಶ



ಭಾರತ ರತ್ನ ಪಂಡಿತ ಭೀಮಸೇನ ಜೋಶಿ ಅವರ ಹಿರಿಯ ಶಿಷ್ಯ, ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ ಮಾಧವ ಗುಡಿ ಅವರು ಏಪ್ರಿಲ್ 21ರಂದು ಧಾರವಾಡದಲ್ಲಿ ನಿಧನರಾದರು. ಗುರು ಭೀಮಸೇನ ಜೋಶಿ ಅವರು ಗಾನದಲ್ಲಿ ಲೀನವಾಗಿ (ಜ.23) ಮೂರೇ ತಿಂಗಳಲ್ಲಿ ಶಿಷ್ಯನೂ ಗಂಧರ್ವಲೋಕ ಸೇರಿಕೊಂಡಿರುವುದು ಸಂಗೀತಲೋಕಕ್ಕೆ ಭಾರೀ ಆಘಾತ ತಂದಿದೆ.

ಇವರ ನಿಧನದೊಂದಿಗೆ ಕಿರಾಣೆ ಘರಾಣೆಯ ಮತ್ತೊಂದು  ಕೊಂಡಿ ಕಳಚಿದಂತಾಗಿದೆ. ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದ ಪಂಡಿತ ಮಾಧವ ಗುಡಿ ಅವರಿಗೆ 69 ವರ್ಷವಾಗಿತ್ತು. ಪಂಡಿತ ಮಾಧವ ಗುಡಿ ಅವರು ಭಾರತ ರತ್ನ ಪಂ। ಭೀಮಸೇನ ಜೋಶಿಯವರ ಬಳಿ ಶಿಷ್ಯತ್ವ ಪಡೆದು ಸುಮಾರು 30 ವರ್ಷ ಕಾಲ ಅವರ ಮನೆಯಲ್ಲೇ ಇದ್ದು ಗುರುಕುಲ ಪದ್ಧತಿಯಲ್ಲಿ ಸಂಗೀತಾಭ್ಯಾಸ ಮಾಡಿದರು. ಗುರುವಿನ ಗುಲಾಮನಾಗಿ ಅವರೊಂದಿಗೆ ದೇಶ ವಿದೇಶಗಳಲ್ಲಿ ಸಂಗೀತ ಕಛೇರಿ ನೀಡಿದರು. ಅಮೆರಿಕ, ಅಬುಧಾಬಿ, ಮಸ್ಕತ್, ದುಬೈ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಕಾರ್ಯಕ್ರಮ ನೀಡಿದ್ದರು.

ಕಿರಾಣೆ ಘರಾಣೆ ಅಷ್ಟೇ ಅಲ್ಲ, ದಾಸವಾಣಿ, ಖಯಾಲ್ ಗಾಯನ, ತುಮರಿ, ಹಿಂದಿ ಭಜನ್‌ಗಳನ್ನೂ ಸುಶ್ರಾವ್ಯವಾಗಿ ಹಾಡಿ ಸಂಗೀತ ಪ್ರೇಮಿಗಳ ಮನಸೂರೆಗೊಂಡಿದ್ದರು. ಭೀಮಸೇನ ಜೋಶಿ ಮತ್ತು ಮಾಧವ ಗುಡಿ ಅವರ ಜುಗಲಬಂದಿ ಭಾರತದ ಎಲ್ಲಾ ಪ್ರದೇಶಗಳಲ್ಲಿ ಮಾತ್ರವಲ್ಲ ವಿದೇಶದಲ್ಲಿಯೂ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿತ್ತು. ಭೀಮಸೇನ ಜೋಶಿ ಅವರಲ್ಲಿ ಶಿಷ್ಯತ್ವ ಸ್ವೀಕರಿಸುವ ಮೊದಲು ಮಾಧವ ಗುಡಿ ಅವರು ಬಸವರಾಜ ರಾಜಗುರು ಅವರಲ್ಲಿ ಆರಂಭಿಕ ತರಬೇತಿ ಪಡೆದಿದ್ದರು. ಜೋಶಿ ಅವರಂತೆಯೇ ಮಾಧವ ಗುಡಿ ಅವರು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಅನೇಕ ಯುವ ಪ್ರತಿಭೆಗಳಿಗೆ ತರಬೇತಿ ನೀಡಿದ್ದಾರೆ. ಮಾಧವ ಗುಡಿಯವರು ಆಕಾಶವಾಣಿಯ ಅಗ್ರ ಕಲಾವಿದರಾಗಿದ್ದರು.



**2010, ನವೆಂಬರ್ 28ರಂದು ದೆಹಲಿ ಕರ್ನಾಟಕ ಸಂಘದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾಧವ ಗುಡಿ ಅವರು ಭಾಗವಹಿಸಿ ಹಿಂದೂಸ್ತಾನೀ ಗಾಯನದ ಮೂಲಕ ದೆಹಲಿ ಸಂಗೀತ ಪ್ರೇಮಿಗಳ ಮನಸೂರೆಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅಗಲಿದ ಚೇತನಕ್ಕೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.**


Saujanya Printing Press

A HOUSE OF QUALITY PRINTING

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ದೆಹಲಿಯಲ್ಲಿ ಕನ್ನಡ ನಾಡು ನುಡಿ ಉತ್ಸವ



ಉತ್ಸವ ಉದ್ಘಾಟಿಸುತ್ತಿರುವ ನಟಿ ಲೀಲಾವತಿ, ಸಾಹಿತಿ ದೊಡ್ಡರಂಗೇಗೌಡ ಮತ್ತು ನಟ ವಿನೋದ್‌ರಾಜ್

ನೃಪತುಂಗ ಕಲಾನಿಕೇತನ (ರಿ) ಬೆಂಗಳೂರು ಇವರಿಂದ ನವದೆಹಲಿಯ ವಿಶ್ವಯುವಕ ಕೇಂದ್ರದ ಸಭಾಂಗಣದಲ್ಲಿ ಏಪ್ರಿಲ್ 24, ಭಾನುವಾರದಂದು ಕನ್ನಡ ನಾಡು ನುಡಿ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಉತ್ಸವದ ಉದ್ಘಾಟನೆಯನ್ನು ಪಂಚಭಾಷಾ ತಾರೆ ಕನ್ನಡ ಚಿತ್ರರಂಗದ ಹಿರಿಯ ನಟಿ ಡಾ. ಎಂ. ಲೀಲಾವತಿಯವರು ನೆರವೇರಿಸಿ ಮಾತನಾಡಿ "ಇಂದು ಡಾ. ರಾಜ್‌ಕುಮಾರ್ ಹುಟ್ಟಿದ ದಿನದ ಸಂಭ್ರಮದಲ್ಲಿ ಕನ್ನಡದ ಉತ್ಸವವು ನೆರವೇರಿದ್ದು ತುಂಬಾ ಸಂತೋಷವಾಗಿದೆ. ದೆಹಲಿಯಲ್ಲಿ ಇನ್ನೂ ಹೆಚ್ಚಿನ ಕನ್ನಡಪರ ಕಾರ್ಯಕ್ರಮಗಳು, ಸಮ್ಮೇಳನಗಳು ನಡೆಯಲಿ" ಎಂದು ಆಶಿಸುತ್ತ ದೆಹಲಿ ಕನ್ನಡಿಗರೆಲ್ಲರಿಗೂ ತಮ್ಮ ಪ್ರೀತಿಯ ಕೃತಜ್ಞತೆಗಳನ್ನು ಅರ್ಪಿಸಿದರು.

ಲೀಲಾವತಿಯವರ ಪುತ್ರ ಚಿತ್ರನಟ ವಿನೋದರಾಜ್ ಮಾತನಾಡಿ ಕನ್ನಡ ನಾಡು–ನುಡಿ ಉತ್ಸವದಲ್ಲಿ 10 ಲಕ್ಷ ಜನ ಸೇರುವುದು ಮುಖ್ಯವಲ್ಲ. ದೆಹಲಿಯಲ್ಲಿ 100 ಜನ ಸೇರುವುದು ಮುಖ್ಯವೆಂದರು. ಜಾತಿ, ಧರ್ಮ, ಭೇಧವಿಲ್ಲದೇ ಕನ್ನಡವೊಂದೇ ಒಂದೇ ಜಾತಿ, ಒಂದೇ ಧರ್ಮ ಎಂಬ ಭಾವನೆಯಿಂದ ಕನ್ನಡಪರ ಕೆಲಸ ಮಾಡುತ್ತಿರುವ ಹೊರನಾಡ ಕನ್ನಡಿಗರು ಹೃದಯವಂತರು ಎಂದು ಹೇಳಿದರು.

ಜಾನಪದ ಕವಿ ಡಾ. ದೊಡ್ಡರಂಗೇಗೌಡರು ಬರೆದಿರುವ ನೂತನ ಕವನ ಸಂಕಲನ "ಆಲ–ಬೇಲ" ಪುಸ್ತಕವನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಬಿಡುಗಡೆಗೊಳಿಸಿ ಶುಭ ಹಾರೈಸಿದರು.

ಕಲಾ ಉತ್ಸವದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಡಾ ದೊಡ್ಡರಂಗೇಗೌಡರು "ಕನ್ನಡ ಭಾಷೆ ಎರಡು ಸಾವಿರ ವರ್ಷಗಳ ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಪ್ರಾಚೀನ ಗ್ರೀಕ್‌ನಲ್ಲಿ ಎರಡನೇ ಶತಮಾನದಲ್ಲಿಯೇ ಕನ್ನಡ ಪದ ಬಳಕೆ ಇರುವುದು ಬೆಳಕಿಗೆ ಬಂದಿದೆ. ಪ್ರಸ್ತುತ ಕನ್ನಡ ನಾಡಿನಲ್ಲಿಯೇ ಕನ್ನಡ ಭಾಷೆಗೆ ಕಿಮ್ಮತ್ತು ಇಲ್ಲದಿರುವುದು ದುರ್ದೈವದ ಸಂಗತಿ" ಎಂದು ವಿಷಾದ ವ್ಯಕ್ತಪಡಿಸಿದರು. ಪ್ರತಿಯೊಬ್ಬರೂ ಮಾತೃಭಾಷೆ ಕನ್ನಡವನ್ನು ಕಡ್ಡಾಯವಾಗಿ ಮಕ್ಕಳಿಗೆ ಕಲಿಸಬೇಕೆಂದು ಕರೆ ಇತ್ತರು.

ನೃಪತುಂಗ ಕಲಾನಿಕೇತನದ ಅಧ್ಯಕ್ಷ ಮಾರುತಿ ಬಡಿಗೇರ್ ಸ್ವಾಗತಿಸಿದರೆ, ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀನಾಥ್ ಎನ್.ಆರ್. ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಸ್ವಾತಿ ಭಾರದ್ವಾಜ್ ಅವರ ಪ್ರಾರ್ಥನಾ ನೃತ್ಯದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಹಿರಿಯ ನಟಿ ಡಾ. ಎಂ. ಲೀಲಾವತಿ, ವಿನೋದರಾಜ್ ಹಾಗೂ ವಿಧಾನ ಪರಿಷತ್ತು ಸದಸ್ಯರಾದ ಡಾ. ದೊಡ್ಡರಂಗೇಗೌಡ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಜೈಪುರ ಕರ್ನಾಟಕ ಸಂಘದ ಅಧ್ಯಕ್ಷ ಡಾ. ಮನೋಹರ್ ಭಟ್‌ರಿಗೆ ನೃಪತುಂಗ ಕಲಾ ನಿಕೇತನದ ಅಧ್ಯಕ್ಷ ಮಾರುತಿ ಬಡಿಗೇರ್ ಸನ್ಮಾನಿಸಿ ಗೌರವಿಸಿದರು. ದೆಹಲಿಯ ಮೆಹರೋಲಿ ಕನ್ನಡ ಸಂಘದ ಅಧ್ಯಕ್ಷ ಇಸ್ಮಾಯಿಲ್ ಬುಡಂದಿ ಅವರು ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಕರ್ನಾಟಕದಿಂದ ಆಗಮಿಸಿದ್ದ ವಿವಿಧ ತಂಡಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಚಿತ್ರನಟ ವಿನೋದರಾಜ್ ಅವರ ಅದ್ಭುತ ನೃತ್ಯಕ್ಕೆ ತಾಯಿ ಲೀಲಾವತಿ ಹೆಜ್ಜೆ ಹಾಕಿ ಕುಣಿದ ದೃಶ್ಯ ಮನ ಮೋಹಕವಾಗಿತ್ತು.

❑ ಎನ್.ಆರ್.ಶ್ರೀನಾಥ್

# ಭರತ್ ಕುಮಾರ್ ಪೊಲಿಪು ಅವರಿಗೆ ಪಿ. ಹೆಚ್. ಡಿ. ಪದವಿ



ಮುಂಬಯಿಯ ಕರ್ನಾಟಕ ಸಂಘದ ಕಾರ್ಯದರ್ಶಿ, ಖ್ಯಾತ ರಂಗಕರ್ಮಿ ಭರತ್ ಕುಮಾರ್ ಪೊಲಿಪು ಅವರು ಬರೆದು ಸಲ್ಲಿಸಿದ "ಮುಂಬಯಿ ಕನ್ನಡ ರಂಗಭೂಮಿ ಒಂದು ತೌಲನಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಮನ್ನಿಸಿ ಅವರಿಗೆ ಮುಂಬಯಿ ವಿಶ್ವ ವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

ಭರತ್ ಕುಮಾರ್ ಪೊಲಿಪು ಅವರು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ। ಜಿ.ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನ ಮಹಾಪ್ರಬಂಧವನ್ನು ಬರೆದು ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ್ದರು. ರಂಗಕರ್ಮಿ, ಸಂಘಟಕ, ಲೇಖಕ ಭರತ್ ಕುಮಾರ್ ಪೊಲಿಪು ಅವರು ಕನ್ನಡಿಗರಿಗೆ ಚಿರಪರಿಚಿತರು.

ಖ್ಯಾತ ರಂಗ ನಿರ್ದೇಶಕರಾದ ಬಿ. ಆರ್. ನಾಗೇಶ್, ಉದ್ಯಾವರ ಮಾಧವಾಚಾರ್ಯ, ಪ್ರಸನ್ನ, ಶ್ರೀನಿವಾಸ ಪ್ರಭು ಅವರ ಗರಡಿಯಲ್ಲಿ ಪಳಗಿದ ಭರತ್ ಕುಮಾರ್ ಸೃಜನಶೀಲ ನಿರ್ದೇಶಕರಾಗಿ ಹೆಸರು ಮಾಡಿದ್ದಾರೆ. ಅವರು ರಚಿಸಿದ ತುಳು ನಾಟಕ 'ಅರುಂಧತಿ'ಗೆ ದಿ. ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಲಭಿಸಿದೆ.

ಮುಂಬಯಿ ರಂಗ ಭೂಮಿಯಲ್ಲಿ ಕಳೆದ ಎರಡು ದಶಕಗಳಿಂದ ಕ್ರಿಯಾಶೀಲರಾಗಿರುವ ಇವರು ಈಗಾಗಲೇ ರಾವಿ ನದಿ ದಂಡೆಯಲ್ಲಿ, ಆಷಾಢದ ಒಂದು ದಿನ, ನೀ ಮಾಯೆಯೊಳಗೋ, ಪೊಲೀಸರಿದ್ದಾರೆ ಎಚ್ಚರಿಕೆ, ಗುಮ್ಮನೆಲ್ಲಿಹನೆ ತೋರಮ್ಮ, ಬದುಕ ಮನ್ನಿಸು ಪ್ರಭುವೇ, ಸಾಯೋ ಆಟ, ಯಾವ ನದಿ ಯಾವ ಪಾತ್ರ, ಗಿಡಗಳ ಜೊತೆ ಮಾತನಾಡುವ ಹುಡುಗ, ಉರಿದವರು, ಟಿ. ಪ್ರಸನ್ನನ ಗ್ರಹಸ್ಥಾಶ್ರಮ, ಶಾಂಡಿಲ್ಯ ಪ್ರಹಸನ, ಅಂಬೆ, ಮೃಗ ತೃಷ್ಣಾ ಮುಂತಾದ ಪರಿಣಾಮಕಾರಿ ನಾಟಕಗಳನ್ನು ನಿರ್ದೇಶಿಸಿ ಹೆಸರು ಮಾಡಿದ್ದಾರೆ.

ಮುಂಬಯಿ ಕರ್ನಾಟಕ ಸಂಘದ ನಿರಂತರ ಸಕ್ರಿಯ ಕಾರ್ಯಕರ್ತರಾಗಿರುವ ಪೊಲಿಪು ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಅಂಬೆ ಹಾಗೂ ಮೃಗತೃಷ್ಣಾ ನಾಟಕಗಳನ್ನು ಪ್ರದರ್ಶಿಸಿ ಅಪಾರ ಮೆಚ್ಚುಗೆ ಗಳಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅಖಿಲ ಭಾರತ ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಒಕ್ಕೂಟದ ಕಾರ್ಯದರ್ಶಿಯಾದ ಪೊಲಿಪು ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

# ದೆಹಲಿ ಒಕ್ಕಲಿಗ ಗೌಡ ಸಂಘದ ವಾರ್ಷಿಕೋತ್ಸವ



ಕಾರ್ಯಕ್ರಮ ಉದ್ಘಾಟಿಸುತ್ತಿರುವ ಲೋಕಸಭಾ ಸದಸ್ಯ ಚೆಲುವರಾಯ ಸ್ವಾಮಿ ಹಾಗೂ ಸಾಹಿತಿ ದೊಡ್ಡರಂಗೇಗೌಡ

ದೆಹಲಿ ಒಕ್ಕಲಿಗ ಗೌಡ ಸಂಘವು ವಾರ್ಷಿಕೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏಪ್ರಿಲ್ 24, 2011ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜಿಸಿತ್ತು. ಲೋಕಸಭಾ ಸದಸ್ಯರಾದ ಎನ್. ಚೆಲುವರಾಯ ಸ್ವಾಮಿ ಹಾಗೂ ಖ್ಯಾತ ಸಾಹಿತಿ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ದೊಡ್ಡರಂಗೇಗೌಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷ ಡಾ. ಬಿ.ಟಿ. ಚಿದಾನಂದಮೂರ್ತಿಯವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಸುಪ್ರೀಂಕೋರ್ಟಿನ ಹಿರಿಯ ವಕೀಲರಾದ ಈ.ಸಿ. ವಿದ್ಯಾಸಾಗರ್ ಅವರು ದೆಹಲಿ ಒಕ್ಕಲಿಗ ಗೌಡ ಸಂಘ ನಡೆದು ಬಂದ ದಾರಿಯನ್ನು ನೆನಪಿಸಿಕೊಟ್ಟರು. ನಂತರ ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಮುಖ್ಯ ಅತಿಥಿಗಳಾದ ಚೆಲುವರಾಯ ಸ್ವಾಮಿಯವರು "ನೇಗಿಲ ಯೋಗಿ ಒಕ್ಕಲಿಗರು ದೇಶದ ಬೆನ್ನೆಲುಬು. ರಾಜ್ಯದಲ್ಲಿನ ಹಿರಿಯ ಸ್ವಾಮೀಜಿಗಳು ಹಾಗೂ ಇತರೆ ರಾಜಕೀಯ ವ್ಯಕ್ತಿಗಳು ಒಕ್ಕಲಿಗ ಸಮುದಾಯಕ್ಕೆ ಒಳ್ಳೆಯ ಮಾರ್ಗದರ್ಶನ ನೀಡಿ ರಾಜ್ಯವನ್ನು ಮುಂದುವರಿಸಬೇಕು. ದೆಹಲಿ ಒಕ್ಕಲಿಗ ಗೌಡ ಸಂಘದ ಸುಮಾರು 200 ಕುಟುಂಬಗಳು ಬಂಧುಬಳಗದಂತೆ ಒಟ್ಟು ಸೇರಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯ" ಎಂದು ತಿಳಿಸಿದರು.

ನಂತರ ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಸಾಹಿತಿ ಡಾ. ದೊಡ್ಡರಂಗೇಗೌಡರು ರಾಷ್ಟ್ರಕವಿ ವಿಶ್ವಮಾನವ ಕುವೆಂಪು ಅವರ ನೇಗಿಲು ಹಿಡಿಯುವ ಯೋಗಿ ಹಾಡನ್ನು ಹಾಡುತ್ತಾ ದೆಹಲಿ ಒಕ್ಕಲಿಗ ಸಂಘದ ಎಲ್ಲಾ ಕಾರ್ಯಕ್ರಮಗಳನ್ನು ಶ್ಲಾಘಿಸಿದರು. ಈ ಸಮುದಾಯಕ್ಕೆ ಸೇರಿದ ರಾಷ್ಟ್ರಕವಿ ಕುವೆಂಪು ಹಾಗೂ ಬೆಂಗಳೂರನ್ನು ಕಟ್ಟಿದ ಕೆಂಪೇಗೌಡ ಅವರ ಕುರಿತು ಮಾತನಾಡಿದರು. ಪ್ರತೀ ವರ್ಷ ಇದೇ ರೀತಿ ರಾಷ್ಟ್ರಕವಿ ಕುವೆಂಪು ಉತ್ಸವ ಹಾಗೂ ಕೆಂಪೇಗೌಡ ಉತ್ಸವವನ್ನು ಆಚರಿಸುವಂತೆ ಮನವಿ ಮಾಡಿಕೊಂಡರು. ಕಾರ್ಯಕ್ರಮದ ಕೊನೆಯಲ್ಲಿ ಮುಖ್ಯ ಅತಿಥಿಗಳಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಿಂದ ಚೆಲುವರಾಯ ಸ್ವಾಮಿಯವರಿಗೆ ಕಾರ್ಯದರ್ಶಿ ಸಿ.ಎಂ. ನಾಗರಾಜ ಹಾಗೂ ಸಾಹಿತಿ ಡಾ. ದೊಡ್ಡರಂಗೇಗೌಡ ಅವರಿಗೆ ಸಂಘದ ಪರವಾಗಿ ಉಪಾಧ್ಯಕ್ಷ ಬಿ.ಕೆ. ಬಸವರಾಜು ಅವರು ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.
ನಂತರ ಸಂಘದ ಸದಸ್ಯರು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಶೋಭಾ ನಾಗರಾಜ ಮತ್ತು ಸಂಗಡಿಗರಿಂದ ಕುವೆಂಪು ಗೀತೆಗಳು, ಡಾ.ಬಿ.ಟಿ. ಚಿದಾನಂದಮೂರ್ತಿ ತಂಡದಿಂದ ಯೋಗ ಪ್ರದರ್ಶನ, ಬೇಬಿ ಸಾನ್ವಿ ನಾರಾಯಣ ಗೌಡ, ಕುಮಾರಿ ಕಾವ್ಯಶ್ರೀ ಶ್ರೀನಿವಾಸ, ಸ್ವಾತಿ ಶ್ರೀನಿವಾಸ್ ಮತ್ತು ತಂಡ, ಕು. ಹಿತಾ ಗೌಡ, ಕು. ಚಾಂದಿನಿ ಸುರೇಶ್, ಕು. ವಂದನಾ ರೈ ಅವರುಗಳ ನೃತ್ಯ ಪ್ರದರ್ಶನ, ಗುಡ್ಡೇಗೌಡ, ಡಾ. ಪುರುಷೋತ್ತಮ ಬಿಳಿಮಲೆ ಅವರಿಂದ ಹಾಡು, ಸಾಮ್ರಾಟ್ ಹಾಗೂ ಸನ್ಮಾನ್ ತಂಡದಿಂದ ನೃತ್ಯರೂಪಕ ಮತ್ತು ಹಾಸ್ಯ, ಎ.ಟಿ. ಶ್ರೀನಿವಾಸ್ ಮತ್ತು ಗಿರೀಶ ತಂಡದವರ ಹಾಸ್ಯ ರೂಪಕ, ಹೇಮಲತಾ ಗುಡ್ಡೇಗೌಡ ಅವರ ರಕ್ತಾಕ್ಷಿ ಏಕಪಾತ್ರಾಭಿನಯ ಎಲ್ಲರ ಮನಮೆಚ್ಚುಗೆ ಪಡೆಯಿತು.
ಕಾರ್ಯಕ್ರಮದ ನಿರೂಪಣೆಯನ್ನು ಎಸ್.ಸಿ. ಹೇಮಲತಾ ಹಾಗೂ ಸರೋಜಾ ಮಾಧವ ಅವರು ಮಾಡಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಕಾರ್ಯದರ್ಶಿ ಅನಂತರಾಮ ಅರಳಿ ಮಾಡಿದರು.
ದೆಹಲಿ ಒಕ್ಕಲಿಗ ಗೌಡ ಸಂಘದ ಕಾರ್ಯದರ್ಶಿ ಅನಂತರಾಮ ಅರಳಿಯವರ ತೆರವಾದ ಸ್ಥಾನಕ್ಕೆ ಇದೀಗ ಶ್ರೀ ಪಿ.ಸಿ. ಶ್ರೀನಿವಾಸ್ ಅವರು ಆಯ್ಕೆಯಾಗಿದ್ದಾರೆ.

❑ ಡಾ.ಬಿ.ಟಿ ಚಿದಾನಂದ ಮೂರ್ತಿ

# ಸ್ಮಿತಾಪ್ರಕಾಶ್ ನೃತ್ಯ ಪ್ರದರ್ಶನ



'ಅಭಿನಯ ಆರಾಧನಾ' ಇದರ ಆಶ್ರಯದಲ್ಲಿ 03.04.2011ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಕಲಾವಿದೆ ಶ್ರೀಮತಿ ಸ್ಮಿತಾಪ್ರಕಾಶ್ ಅವರ ಭರತನಾಟ್ಯ ಕಾರ್ಯಕ್ರಮ ಜರುಗಿತು. ದೆಹಲಿಯ ವಿವಿಧೆಡೆಯಿಂದ ಬಂದ ಕಲಾಸಕ್ತರು ಕಾರ್ಯಕ್ರಮವನ್ನು ವೀಕ್ಷಿಸಿದರು. ಪುರಾಣ, ಭಜನೆ ಮತ್ತು ಆಧುನಿಕ ಕಾವ್ಯಗಳಿಂದ ಆಧರಿಸಿದ ಹಾಡುಗಳಿಗೆ ಸ್ಮಿತಾ ಪ್ರಕಾಶ್ ಅವರು ಅಪೂರ್ವ ಭಾವದೊಂದಿಗೆ ಶಾಸ್ತ್ರೀಯ ನೃತ್ಯ ಪ್ರದರ್ಶಿಸಿದರು.
"ಪತ್ರಕರ್ತೆ ಸ್ಮಿತಾ ಪ್ರಕಾಶ್ ಬಹುಮುಖ ಪ್ರತಿಭೆ ಎನ್ನುವುದು ನನಗೆ ತಿಳಿದಿದೆ. ಇಂದು ಇಲ್ಲಿ ಅವರ ನೃತ್ಯ ಪ್ರತಿಭೆ ಅನಾವರಣಗೊಂಡಿದೆ. ಅದರಲ್ಲೂ 'ಕೃಷ್ಣಾ ನೀ ಬೇಗನೇ ಬಾರೋ' ನೃತ್ಯ ಅತ್ಯುತ್ತಮವಾಗಿತ್ತು" ಎಂದು ಮುಖ್ಯ ಅತಿಥಿ, ಕರ್ನಾಟಕ ಸರ್ಕಾರದ ಮಾಜಿ ಮುಖ್ಯಕಾರ್ಯದರ್ಶಿ ಸುಧಾಕರ ರಾವ್ ಶ್ಲಾಘಿಸಿದರು. ಅವರ ಪತ್ನಿ, ಭಾರತದ ವಿದೇಶಾಂಗ ಕಾರ್ಯದರ್ಶಿ ಶ್ರೀಮತಿ ನಿರುಪಮಾ ರಾವ್ ಅವರು ಕೂಡಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.
ಹಿನ್ನಲೆಯಲ್ಲಿ ನೃತ್ಯ ಗುರು ಶ್ರೀಮತಿ ಜಯಲಕ್ಷ್ಮಿ ಈಶ್ವರ್ ನಟುವಾಂಗ, ಸುಧಾರಾಘವನ್ ಅವರ ಗಾಯನ, ತಂಜಾವೂರು ಕೇಶವನ್ ಮೃದಂಗ ಹಾಗೂ ಜಿ. ರಘುರಾಮನ್ ಅವರ ಕೊಳಲುವಾದನ ಕಲಾರಸಿಕರ ಮೆಚ್ಚುಗೆ ಗಳಿಸಿತು. ಎಲ್ಲಾ ಕಲಾವಿದರಿಗೆ ಸುಧಾಕರ ರಾವ್ ಹೂಗುಚ್ಛ ನೀಡಿ ಗೌರವಿಸಿದರು.
ಸಂಘದ ಮಾಜಿ ಅಧ್ಯಕ್ಷ ಐ. ರಾಮಮೋಹನ್ ರಾವ್ ಅವರ ಸುಪುತ್ರಿ ಸ್ಮಿತಾ ಪ್ರಕಾಶ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ರೇಣುಕಾ ನಿಡಗುಂದಿ ಅವರು ಹೂಗುಚ್ಛ ನೀಡಿ ಗೌರವಿಸಿದರು.

**Delhi Karnataka Sangha's Abhimatha Monthly,**
**May -2011, Price Rs.1/-  RNI Regn. No. 53405/91, DL-SW-15/4016/10-11-12**
**Printout Date : May 8th / 9th, Postal Date :10th / 11th, Total Pages-20**



**Editor: Smt.Usha Bharatadri, Printed & Published by C.M.Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,**